ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ

ಪಿಎಚ್. ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ

ಮಹಾಪ್ರಬಂಧದ

ಅಂತಿಮ ಸಾರಲೇಖ

ಸಂಶೋಧಕರು

ಅರ್ಷಿಯ

ಮಾರ್ಗದರ್ಶಕರು

ಡಾ. ನಾಗಪ್ಪ ಗೌಡ ಆರ್.

ಸಹ ಪ್ರಾಧ್ಯಾಪಕರು

ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ - ೫೭೪೧೯೯

೨೦೨೩

ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ

ಪ್ರಸ್ತಾವನೆ

- ಅಧ್ಯಯನದ ಉದ್ದೇಶ
- ಅಧ್ಯಯನದ ವ್ಯಾಪ್ತಿ
- ಅಧ್ಯಯನದ ವೈಧಾನಿಕತೆ
- ಈವರೆಗೆ ನಡೆದಿರುವ ಅಧ್ಯಯನಗಳು

ಅಧ್ಯಾಯ ೧: ಮಹಿಳಾ ಪ್ರತಿನಿಧೀಕರಣದ ನೆಲೆಗಳು

೧.೧ ಕಥನ ಸಾಹಿತ್ಯ ಹಾಗೂ ಸ್ತ್ರೀತ್ವದ ಪರಿಕಲ್ಪನೆ

೧.೨ ಮಹಿಳೆ ಮತ್ತು ಕೌಟುಂಬಿಕ ನೆಲೆ

೧.೨.೧ ತಲಾಖ್ ಪದ್ಧತಿ

೧.೨.೨ ಸಾಹಿತ್ಯದಲ್ಲಿ 'ತಲಾಖ್' ನ ಚಿತ್ರಣ

೧.೨.೩ ಸಾಹಿತ್ಯದಲ್ಲಿ 'ಖುಲಾ'ದ ಚಿತ್ರಣ

೧.೨.೪ ಸಹನೆ

೧.೨.೫ ಬಹುಪತ್ನಿತ್ವ

೧.೩ ಮಹಿಳೆ ಮತ್ತು ಸಾಮಾಜಿಕ ನೆಲೆ

೧.೩.೧ ಲಿಂಗ ಅಸಮಾನತೆ

೧.೩.೨ ಬಡತನ

೧.೩.೩ ವರದಕ್ಷಿಣೆ

೧.೩.೪ ಮೂಢನಂಬಿಕೆ

ಅಧ್ಯಾಯ ೨: ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬ

೨.೧ ಗೃಹಿಣಿ

೧.೨ ವಿಧವೆ

೧.೩ ವಿಚ್ಛೇದಿತೆ

೧.೪ ಪರಿತ್ಯಕ್ತೆ

ಅಧ್ಯಾಯ ೩: ಕಥನ ಸಾಹಿತ್ಯದಲ್ಲಿ ಮಹಿಳಾ ದೌರ್ಜನ್ಯ

೩.೧ ಕೌಟುಂಬಿಕ ದೌರ್ಜನ್ಯ

೩.೧.೧ ಕಥನಗಳಲ್ಲಿ ಚಿತ್ರಿತವಾಗಿರುವ ಕೌಟುಂಬಿಕ ದೌರ್ಜನ್ಯ

೩.೨ ಸಾಮಾಜಿಕ ದೌರ್ಜನ್ಯ

೩.೨.೧ ಸಮಾಜ ಹೆಣ್ಣನ್ನು ಗ್ರಹಿಸುವ ನೆಲೆ

೩.೨.೨ ಕಥನಗಳಲ್ಲಿ ಚಿತ್ರಿತವಾಗಿರುವ ಸಾಮಾಜಿಕ ದೌರ್ಜನ್ಯ

ಅಧ್ಯಾಯ ೪: ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಆರೋಗ್ಯ

೪.೧ ಕುಟುಂಬ ಮತ್ತು ಮಹಿಳಾ ಆರೋಗ್ಯ

೪.೨ ಸಮಾಜದಲ್ಲಿ ಮಹಿಳೆಯು ಅನಾರೋಗ್ಯಗೊಳ್ಳಲು ಕಾರಣಗಳು

೪.೩ ಕಥನಗಳಲ್ಲಿ ಮಹಿಳೆಯ ಆರೋಗ್ಯ ಚಿತ್ರಣ

೪.೪ ಕಥನಗಳಲ್ಲಿ ಬರುವ ಸಕಾರಾತ್ಮಕ ನಿಲುವುಗಳು

ಅಧ್ಯಾಯ ೫: ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಉದ್ಯೋಗ

೫.೧ ಶಿಕ್ಷಣ ಮತ್ತು ಮಹಿಳೆ

೫.೨ ಅವಿದ್ಯಾವಂತ ಮಹಿಳೆ ಮತ್ತು ಕಸುಬು

೫.೩ ವಿದ್ಯಾವಂತ ಮಹಿಳೆ ಮತ್ತು ವೃತ್ತಿ

ಸಮಾರೋಪ

- **ಫಲಿತಗಳು**
- **ಹೊಸ ಸಾಧ್ಯತೆಗಳು**

ಅನುಬಂಧ-೧

ಪದಗಳ ಅರ್ಥ

ಅನುಬಂಧ-೨

ಲೇಖಕರ ಪರಿಚಯ

ಅನುಬಂಧ-೩

ಆಕರ ಗ್ರಂಥಗಳು

ಪ್ರಸ್ತಾವನೆ:

ಸಂಶೋಧನೆಯೆಂದರೆ ಹೊಸತನದ ಹುಡುಕಾಟ. ಅದೊಂದು ತಪಸ್ಸು. ನಿರಂತರವಾದ ಹೊಸತನದ ಹುಡುಕಾಟದ ತಪಸ್ಸಿನಿಂದ ಸಿಗುವ ಪ್ರತಿಫಲವೇ ಸಂಶೋಧನೆ.

"ಸಂಶೋಧನೆ- ಎನ್ನುವುದು ಹೆಸರೇ ಸೂಚಿಸುವಂತೆ ಅನ್ವೇಷಣ ರೂಪದ ಬೌದ್ಧಿಕ ಕ್ರಿಯೆಯಾಗಿದೆ. ಮಾನವನ ಸಾಮಾನ್ಯ ಪ್ರವೃತ್ತಿಯಾಗಿರುವ ಇದು ಇಪ್ಪತ್ತನೆಯ ಶತಮಾನದ ಮಾನವನ ಅಸಾಮಾನ್ಯ ಲಕ್ಷಣವಾಗಿದೆ. ಕಲೆ, ವಿಜ್ಞಾನ, ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಹಳೆಯದರ ಅನ್ವೇಷಣೆ, ಹೊಸದರ ಆವಿಷ್ಕರಣ ಕಾರ್ಯಗಳು ಇಂದು ವ್ಯಕ್ತಿ ಮತ್ತು ಸಂಸ್ಥೆಗಳ ಮಟ್ಟದಲ್ಲಿ ಜಗತ್ತಿನಾದ್ಯಂತ ಸ್ಪರ್ಧಾತ್ಮಕ ರೀತಿಯಿಂದ ಮುನ್ನಡೆದಿವೆ."

೨೦ನೇ ಶತಮಾನದ ಕೊನೆಯ ದಶಕಗಳ ಮತ್ತು ಸಮಕಾಲೀನ ಸಂದರ್ಭಗಳಲ್ಲಿ ಹೆಣ್ಣಿನ ಅನುಭವ ಲೋಕವನ್ನು ವಿನೂತನ ರೀತಿಯಲ್ಲಿ ಅನೇಕ ಲೇಖಕರು ತೆರೆದಿಟ್ಟಿದ್ದಾರೆ. 'ನೊಂದ ನೋವ ನೊಂದವರೇ ಬಲ್ಲರು' ಎಂಬಂತೆ ಹೆಣ್ಣಿನ ಎಷ್ಟೋ ಒಳ ಸಂಕಟಗಳು, ಹೆಣ್ಣು ಹೇಳಲು ಸಾಧ್ಯವಾಗದಂತಹ ಎಷ್ಟೋ ನೋವುಗಳು ಲೇಖಕರ ಬರಹದಲ್ಲಿ ವಿಶೇಷವಾಗಿ ದನಿ ಪಡೆದಿವೆ. ಸಾರಾ ಅಬೂಬಕ್ಕರ್, ಶಹನಾಝ್ ಎಂ. ಮೊದಲಾದ ಮುಸ್ಲಿಂ ಲೇಖಕಿಯರು ಮುಸ್ಲಿಂ ಸಂವೇದನೆಯುಳ್ಳ ಸಾಹಿತ್ಯವನ್ನು ರಚಿಸಿದರು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಮಹಿಳೆಯರು ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ಅವರ ಸಮಸ್ಯೆಗಳು ಒಂದೇ. ಜಾತಿ, ಜನಾಂಗ, ಬಣ್ಣ ಬೇರೆಯಾದರೂ ಅನುಭವಿಸುವ ನೋವು, ಹಿಂಸೆಗಳು ಒಂದೇ ರೀತಿ ಆಗಿರುತ್ತವೆ.

"ಮಹಿಳೆಯು ರಚಿಸಿದ್ದೆಲ್ಲಾ ಮಹಿಳಾ ಸಾಹಿತ್ಯ ಎನ್ನುವುದಾದಲ್ಲಿ ಕನ್ನಡದಲ್ಲಿ ಮಹಿಳಾ ಸಾಹಿತ್ಯ ಸಮೃದ್ಧವಾಗಿ ಸೃಷ್ಟಿಯಾಗಿದೆ. ಮಹಿಳಾ ವಿಮೋಚನೆಯನ್ನೇ ಮುಖ್ಯ ಆಶಯವಾಗುಳ್ಳ ಸ್ತ್ರೀವಾದಿ ಸಾಹಿತ್ಯ ಕಳೆದ ಶತಮಾನದ ೭೦-೮೦ ನೇ ದಶಕಗಳಿಂದ ಹೆಚ್ಚಾಗಿ ಕೇಳಿ ಬರುತ್ತಿರುವ ಮಾತು. ಕನ್ನಡ ಸಾಹಿತ್ಯಕ್ಕೆ ಸ್ತ್ರೀವಾದಿ ಸಾಹಿತ್ಯವೆಂಬ ಹೊಸ ಆಯಾಮವೊಂದು ಜೋಡಣೆಯಾದದ್ದು ೨೦ ನೇ ಶತಮಾನದ ೭೦-೮೦ ನೇ ದಶಕಗಳ ಕಾಲಮಾನದಿಂದ. ಸನಾತನ ಧರ್ಮದಲ್ಲಿ ಸೆರೆಯಾದ ಮಹಿಳೆಯರ ಕಷ್ಟಕೋಟಲೆಗಳಿಂದ ಬಿಡುಗಡೆ ಮತ್ತು ಸ್ತ್ರೀ ಸ್ವಾತಂತ್ರ್ಯದ ಹಂಬಲದ ಕುರಿತ ಸಾಹಿತ್ಯ ರಚನೆ ೧೯ನೇ ಶತಮಾನದ ಆದಿಯಲ್ಲೇ ನಂಜನಗೂಡು ತಿರುಮಲಾಂಬ ಅವರಿಂದ

ಆರಂಭವಾಯಿತು." ಆದರೂ ಸ್ತ್ರೀಯು ತನಗಾದ ನೋವು, ದೌರ್ಜನ್ಯಗಳ ವಿರುದ್ಧ ಬಂಡೇಳುವ ಅಭಿವ್ಯಕ್ತಿಯು ಕಂಡುಬರುವುದು ೨೦ನೇ ಶತಮಾನದ ಉತ್ತರಾರ್ಧದಲ್ಲಿ ಎಂದು ಹೇಳಬಹುದು.

ಸಮಾಜ ಮತ್ತು ಸಾಹಿತ್ಯದ ನಡುವೆ ಗಾಢವಾದ ಸಂಬಂಧವಿದೆ. ಸಮಾಜವನ್ನು ಕಟ್ಟುವ, ಮರು ಕಟ್ಟುವ ಕೆಲಸವನ್ನು ಸಾಹಿತ್ಯ ಮಾಡಬೇಕು. ಪ್ರತಿಯೊಬ್ಬ ಸಾಹಿತಿಯೂ ತನ್ನ ಸಂವೇದನೆಗನುಗುಣವಾಗಿ ಬರೆಯುತ್ತಾನೆ. ಹಾಗಿದ್ದು ಮಹಿಳಾ ಸಂವೇದನೆ ಅಥವಾ ಮುಸ್ಲಿಂ ಸಂವೇದನೆಯ ಸಾಹಿತ್ಯವು ಯಾವುದೇ ಒಂದು ಗುಂಪಿನವರ ಸೊತ್ತು ಎಂದು ಭಾವಿಸಬಾರದು. ಈ ರೀತಿ ಮಾಡಿದರೆ ಸಾಹಿತಿಗಳ ಭಾವನೆಯನ್ನು ಇದು ಸಂಕುಚಿತಗೊಳಿಸುತ್ತದೆ. ಯಾವುದೇ ಬಗೆಯ ಸಾಹಿತ್ಯವನ್ನು ರಚಿಸಬೇಕಾದರೆ ಸಂವೇದನೆ ಅನ್ನುವುದು ಬಹಳ ಮುಖ್ಯವಾಗುತ್ತದೆ. ಮಹಿಳಾ ಸಂವೇದನಾ ಸಾಹಿತ್ಯವೂ ಸಹ ಮಹಿಳೆಯಿಂದಲೇ ರಚಿತವಾಗಿರಬೇಕೆಂದಿಲ್ಲ. ಮಹಿಳೆಯು ತನ್ನ ಅಂತಃಕರಣದಿಂದ, ಕಳಕಳಿಯಿಂದ ಸಾಹಿತ್ಯ ರೂಪಿಸಿದಾಗ ಅವಳ ಬರಹ ರೂಪುಗೊಳ್ಳುತ್ತದೆ. ಪ್ರತಿಯೊಂದಕ್ಕೂ ಅನುಭವ ಮುಖ್ಯವಾಗುತ್ತದೆ. ಅನುಭವದಿಂದ ರಚಿತವಾದ ಸಾಹಿತ್ಯ ಪರಿಪಕ್ವವಾದ ಸಾಹಿತ್ಯವಾಗುತ್ತದೆ. ಕೆಲವೊಮ್ಮೆ ಸಂವೇದನೆಯಿಂದಲೂ ಸಾಹಿತ್ಯ ರಚನೆಯಾಗುತ್ತದೆ.

ಮಹಿಳೆ ವಿದ್ಯಾವಂತಳಾಗಿ ಸಮಾಜದಲ್ಲಿ ತನ್ನ ಸ್ಥಾನವನ್ನು ಗಳಿಸಿದರೂ ಸಹ ಆಕೆ ಅಲ್ಲಿಯೂ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ವಿವಿಧ ವೃತ್ತಿಗಳಲ್ಲಿ ಮೇಲಧಿಕಾರಿಗಳಿಂದಲೋ, ಸಹೋದ್ಯೋಗಿಗಳಿಂದಲೋ ಆಕೆ ಶೋಷಣೆಗೆ ಒಳಗಾಗುತ್ತಾಳೆ. ಕೆಲವೊಂದು ಸಂದರ್ಭಗಳಲ್ಲಿ ಇವುಗಳು ಬಹಿರಂಗಗೊಂಡರೆ, ಇನ್ನು ಕೆಲವೊಮ್ಮೆ ಯಾರ ಗಮನಕ್ಕೂ ಬರುವುದಿಲ್ಲ. ಸ್ವಾತಂತ್ರ್ಯ ಸಿಕ್ಕಿ ೭೫ ವರ್ಷಗಳಾದರೂ ಮಹಿಳೆ ಸ್ವತಂತ್ರಳಲ್ಲ. ಗಾಂಧೀಜಿಯವರು ಹೇಳಿದಂತೆ ಯಾವಾಗ ಮಧ್ಯರಾತ್ರಿಯ ವೇಳೆ ಹೆಣ್ಣು ಒಬ್ಬಳೇ ನಡೆದುಕೊಂಡು ಸುರಕ್ಷಿತವಾಗಿ ಮನೆಗೆ ಹೋಗುತ್ತಾಳೋ ಆಗ ಭಾರತ ನಿಜವಾಗಿ ಸ್ವಾತಂತ್ರ್ಯವನ್ನು ಪಡೆದಿದೆ ಎನ್ನಬಹುದು.

ಕರಾವಳಿ ಕನ್ನಡ ಮುಸ್ಲಿಂ ಸಾಹಿತ್ಯವನ್ನು ನೋಡಿದರೆ ಇಲ್ಲಿ ಲೇಖಕರು ಹಾಗೂ ಲೇಖಕಿಯರು ಚಿತ್ರಿಸಿರುವ ಮಹಿಳಾ ಸಂವೇದನೆಯನ್ನು ಕಾಣಬಹುದು. ೧೯೯೦ರ ದಶಕದ ಮಧ್ಯಭಾಗದಲ್ಲಿ ಕನ್ನಡಕ್ಕೆ ಹಲವಾರು ಸ್ತ್ರೀವಾದಿ ಚಿಂತನೆಗಳು ಅನುವಾದವಾಗಿ ಬರತೊಡಗಿವೆ. ಕಥೆ-ಕಾದಂಬರಿ ಕ್ಷೇತ್ರದಲ್ಲಿ ವೈದೇಹಿ, ಸಾರಾ ಅಬೂಬಕ್ಕರ್, ಎಚ್. ನಾಗವೇಣಿ ಮುಂತಾದ ಮಹಿಳೆಯರಿದ್ದಾರೆ. ಬಂಡಾಯ ಸಾಹಿತ್ಯದ ಉಗಮದೊಂದಿಗೆ ಹಲವು ಮುಸ್ಲಿಂ ಸಾಹಿತಿಗಳು ಕನ್ನಡದಲ್ಲಿ ಕಥೆ, ಕಾದಂಬರಿಗಳನ್ನು

ಬರೆಯಲು ಪ್ರಾರಂಭಿಸಿದರು. ಇವರು ತಮ್ಮ ಧರ್ಮದೊಳಗಿನ ಆಗುಹೋಗುಗಳನ್ನು ವೈಚಾರಿಕ ನೆಲೆಯಲ್ಲಿ ವಿಮರ್ಶಿಸುತ್ತಾರೆ. ಇವರಲ್ಲಿ ಬೊಳುವಾರು ಮಹಮ್ಮದ್ ಕುಂಞ, ಸಾರಾ ಅಬೂಬಕ್ಕರ್, ಫಕೀರ್ ಮಹಮ್ಮದ್ ಕಟ್ಪಾಡಿ, ಹಂಝ ಮಲಾರ್, ಏ.ಕೆ. ಕುಕ್ಕಿಲ, ಮುಂತಾದವರು ಮುಖ್ಯರಾದವರು. ಈ ಎಲ್ಲಾ ಸಾಹಿತಿಗಳು ದಕ್ಷಿಣ ಕನ್ನಡ ಜಿಲ್ಲೆ, ಕೇರಳ ಕಾಸರಗೋಡಿನಿಂದ ಬಂದವರಾಗಿದ್ದಾರೆ. ೭೦ ರ ದಶಕದಲ್ಲಿ ಪ್ರಾರಂಭವಾಗಿ ಐದು ದಶಕಗಳುದ್ದಕ್ಕೂ ನಡೆದು ಬಂದ ಇದರ ದಾರಿಯನ್ನು ಗುರುತಿಸುವುದರೊಂದಿಗೆ ಪ್ರಾತಿನಿಧಿಕ ಲೇಖಕ-ಲೇಖಕಿಯರನ್ನು, ಅವರ ಕಥೆಗಳನ್ನೂ ಇಲ್ಲಿ ಅವಲೋಕಿಸಲಾಗುವುದು.

ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸಾರಾ ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ ಇವರ ಕಥೆಗಳಲ್ಲಿ ಬಂಡಾಯದ ಮನೋಭಾವ ಕಾಣಬಹುದು. ಇಲ್ಲಿಯ ಕಥೆಗಳಲ್ಲಿ ಬಿಡುಗಡೆಯ ಭಾವದ ಮಹಿಳಾ ಧೋರಣೆ ಕಾಣಸಿಗುತ್ತದೆ. ಬಿಡುಗಡೆ ಎಂದರೆ ಇದು ಪುರುಷರಿಂದ, ಕುಟುಂಬದಿಂದ, ಬದುಕಿನಿಂದ ಎಂದಲ್ಲ. ಮೌಢ್ಯತೆಯಿಂದ, ಅಜ್ಞಾನದಿಂದ, ಹೇಡಿತನದಿಂದ ಮಾತ್ರ. ಬಂಡಾಯ ತನ್ನ ಸುತ್ತಲೂ ನಡೆಯುವ ಅನ್ಯಾಯಗಳನ್ನು ಪ್ರತಿಭಟಿಸುವ, ವಿರೋಧಿಸುವ ಶಕ್ತಿಯನ್ನು ನೀಡಿತು. ತೆರೆಯ ಮರೆಗೆ ಮಲಗಿದ್ದ ಶಕ್ತಿಗಳಿಗೆ ಹೊಸ ಶಕ್ತಿ ಬಂತು. ಅದ್ಭುತವಾದ ವಿಶಾಲಲೋಕ ತೆರೆದುಕೊಂಡಿತು.

ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿಯೇ ಬಹುಸಂಖ್ಯಾತ ಮಹಿಳಾ ಬರಹಗಾರ್ತಿಯರು ರೂಪುಗೊಂಡದ್ದು ಕುತೂಹಲದ ಸಂಗತಿಯಾಗಿದೆ. "೭೦ ರ ದಶಕದಲ್ಲಿ ನಡೆದ ಜನಪರ ಹೋರಾಟಗಳು ದೇಶದ ರಾಜಕೀಯ, ಸಾಮಾಜಿಕ ಬದುಕಿನಲ್ಲಿ ಮಾತ್ರವೇ ಅಲ್ಲ, ಸಾಹಿತ್ಯ ಕ್ಷೇತ್ರದಲ್ಲಿಯೂ ಮಹತ್ತರ ಬದಲಾವಣೆಗಳನ್ನು ಉಂಟು ಮಾಡಿದ ಪರಿಣಾಮವಾಗಿ ದಲಿತ-ಬಂಡಾಯ ಸಾಹಿತ್ಯಗಳ ಪರಂಪರೆ ಆರಂಭವಾಯಿತು. ಶೋಷಿತ ಕೆಳವರ್ಗ ಕೆಳಜಾತಿಗಳ ಬದುಕು-ಬವಣೆಗಳನ್ನು ಚಿತ್ರಿಸುತ್ತಲೇ ಅವರ ಸ್ಥಿತಿಯಲ್ಲಿ ಬದಲಾವಣೆ ಉಂಟುಮಾಡಬೇಕೆಂಬ ಆಶಯವನ್ನು ಈ ಸಾಹಿತ್ಯ ಪ್ರತಿಪಾದಿಸಿತು. ಈ ಅರಿವಿನಿಂದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದವರಲ್ಲಿ ಬಹುತೇಕ ಮಂದಿ ಆಯಾ ವರ್ಗ ಜಾತಿಗಳಿಗೆ ಸೇರಿದವರೇ ಆಗಿದ್ದರು. ಈ ಸಾಹಿತ್ಯ ಮಾರ್ಗಗಳ ಪ್ರಭಾವ ಲೇಖಕಿಯರ ಮೇಲೆ ಆಗದೇ ಇರಲಿಲ್ಲ. ೭೫ ರ ವರೆಗಿನ ಸಾಹಿತ್ಯಸಂದರ್ಭದಲ್ಲಿ ಬೆರಳೆಣಿಕೆಯಷ್ಟು ಲೇಖಕಿಯರನ್ನು ಬಿಟ್ಟರೆ ಉಳಿದವರೆಲ್ಲರೂ ಮೇಲು ಜಾತಿಗೆ ಸೇರಿದವರು, ಮಧ್ಯಮವರ್ಗದ ಹಿನ್ನೆಲೆ ಉಳ್ಳವರು. ಆದರೆ ಈಗ ಸಮಾಜದ ಕೆಳಜಾತಿ,

ಕೆಳವರ್ಗಗಳಲ್ಲಿ ರೂಪುಗೊಂಡ ಲೇಖಕಿಯರು ತಮ್ಮ ಹಾಗೂ ತಮ್ಮವರ ಬದುಕಿಗೆ ದನಿಯಾಗಿರುವುದು ಒಂದು ಮಹತ್ವದ ಬೆಳವಣಿಗೆ. ಇವರ ಬರಹಗಳಿಂದಾಗಿ ವಿಭಿನ್ನ ಲೋಕದ ಮಹಿಳಾ ಸಂವೇದನೆಗಳು ಕೂಡಿಕೊಂಡು ಲೇಖಕಿಯರ ಸಾಹಿತ್ಯಕ್ಕೆ ಹೊಸ ಆಯಾಮ ಬಂದಂತಾಯಿತು."

ಬಂಡಾಯ ಸಾಹಿತ್ಯದ ಬಹು ಮಹತ್ವದ ಬೆಳವಣಿಗೆಯೆಂದರೆ ಮುಸ್ಲಿಂ ಕಥನ ಸಾಹಿತ್ಯ. "ಬಂಡಾಯ ಸಾಹಿತ್ಯ ಎಂಬುದಕ್ಕೆ ಒಂದು ಹೊಸ ಅರ್ಥವನ್ನೇ ಕೊಟ್ಟವರು ಮುಸ್ಲಿಂ ಲೇಖಕಿಯರು. ಮುಸ್ಲಿಂ ಲೇಖಕಿಯರು ಬರೆಯತೊಡಗಿದ್ದು ಮಹಿಳಾ ಸಾಹಿತ್ಯಕ್ಕೆ ಮಾತ್ರವಲ್ಲ ಕನ್ನಡ ಸಾಹಿತ್ಯಕ್ಕೇ ಒಂದು ವಿಶಿಷ್ಟ ಕೊಡುಗೆ. ಒಂದರ್ಥದಲ್ಲಿ ನಿಜವಾದ ಬಂಡಾಯ ಸಾಹಿತ್ಯ ಎಂದರೆ ಮುಸ್ಲಿಂ ಮಹಿಳೆಯರು ಬರೆದ ಸಾಹಿತ್ಯ ಎಂದೇ. ಯಾಕೆಂದರೆ ಇತರೆ ಬಂಡಾಯ ಸಾಹಿತ್ಯಗಳಲ್ಲಿ ಬಂಡಾಯವಿರುವುದು ಬರವಣಿಗೆಯಲ್ಲಿ ಮಾತ್ರ. ಇಲ್ಲಿ ಅವರು ಏನೇ ಬರೆದರೂ ನಿರ್ಭಯವಾಗಿ ಬರೆಯಬಹುದು. ವೈಯಕ್ತಿಕವಾದ ಯಾವುದೇ ಒತ್ತಡ, ಅಪಾಯಗಳಿಗೆ ಅವರು ತುತ್ತಾಗುವುದಿಲ್ಲ. ಆದರೆ ಮುಸ್ಲಿಂ ಸಾಹಿತಿಗಳ, ಅದರಲ್ಲಿಯೂ ಲೇಖಕಿಯರ ವಿಷಯ ಇದಕ್ಕೆ ತೀರಾ ಭಿನ್ನ. ಅವರ ಬರವಣಿಗೆಯೇ ಒಂದು ಬಂಡಾಯವಾಗಿದೆ."

ಈ ಕಾಲಘಟ್ಟದ ಲೇಖಕರು ತಮ್ಮ ಸ್ವಂತ ಅನುಭವ ಹಾಗೂ ತಮ್ಮ ಸುತ್ತಮುತ್ತಲಿನ ಜನರ ಬದುಕಿನ ಕಥೆಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಬೊಳುವಾರು ಮಹಮ್ಮದ್ ಕುಂಞ್, ಫಕೀರ್ ಮಹಮ್ಮದ್ ಕಟ್ಪಾಡಿ, ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್, ಅಬ್ದುಲ್ ರಶೀದ್ ಮುಂತಾದವರು ಅದುವರೆಗೆ ಅವಜ್ಞೆಗೆ ಗುರಿಯಾಗಿದ್ದ ಮುಸ್ಲಿಂ ಸಂವೇದನೆಗಳನ್ನು ಪರಿಚಯಿಸಿದರು. ಮುಸ್ಲಿಂ ಲೇಖಕರ ಬರವಣಿಗೆಯು ಸಾಹಿತ್ಯ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೇ ಉಂಟು ಮಾಡಿತು. ಮುಸ್ಲಿಂ ಸಮುದಾಯವು ಹಿಂದುಳಿದುದಕ್ಕೆ ಕಾರಣ ಬಡತನ, ಅನಕ್ಷರತೆ, ಮೂಢನಂಬಿಕೆಗಳು ಇತ್ಯಾದಿಗಳನ್ನು ಈ ಲೇಖಕರು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ. ಕೆಲವೊಂದು ಸಂದರ್ಭಗಳಲ್ಲಿ ಇತರ ಸಮುದಾಯದವರ ಬದುಕಿನ ಕಥೆಗಳನ್ನೂ ಚಿತ್ರಿಸಿದ್ದಾರೆ.

ಮುಸ್ಲಿಂ ಲೇಖಕಿಯರು ತಾವು ಅನುಭವಿಸಿ ಚಿತ್ರಿಸಿರುವ ಮಹಿಳೆಯರ ಪಾತ್ರ ಚಿತ್ರಣವು ಅವರ ಕಾದಂಬರಿಗಳಲ್ಲಿ ಮಹಿಳಾ ಪರವಾಗಿ ಮೂಡಿಬಂದಿದೆ. ಈ ಕಾಲದಲ್ಲಿ ಮಹಿಳೆಯರು ಸ್ವತಂತ್ರವಾಗಿ ತಮ್ಮ ಹಕ್ಕಿಗಾಗಿ ಹೋರಾಡುವಂತಾದರು. ಸಮಾಜದಲ್ಲಿ ಹೆಣ್ಣೊಬ್ಬಳು ಧರ್ಮದ ನೆಲೆಯಲ್ಲಿ ಹಲವಾರು ಕಟ್ಟುಪಾಡುಗಳಿಗೆ ಒಳಗಾಗಿ ತನ್ನತನವನ್ನು ಮರೆತು ಬಾಳುವ ಶೋಚನೀಯ ಸ್ಥಿತಿ, ಗಂಡಿನ

ದಬ್ಬಾಳಿಕೆಗೆ ಒಳಗಾಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಹೆಣ್ಣಿನ ಕರುಣಾಜನಕ ಸ್ಥಿತಿಯನ್ನು ಇಲ್ಲಿ ಚಿತ್ರಿಸಲಾಗಿದೆ.

ಆಧುನಿಕ ಕಾಲದಲ್ಲಿ ಮುಸ್ಲಿಂ ಮಹಿಳೆ ತನ್ನ ಸ್ಥಾನಮಾನವನ್ನು ಅರಿತುಕೊಂಡು, ತನಗಾಗುತ್ತಿರುವ ಹಾಗೂ ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಆಕ್ರೋಶವನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸುವುದನ್ನು ಕಾಣಬಹುದು. ಅನೇಕರು ಸಮಾಜದ ಮೌಢ್ಯತೆಗಳನ್ನು ಪ್ರಶ್ನಿಸಿದ್ದಕ್ಕೆ ಟೀಕೆ, ನಿಂದನೆಗೆ ಒಳಗಾದರು. ಸ್ತ್ರೀಪರ ಧೋರಣೆ ಇರುವ ಮುಸ್ಲಿಂ ಪುರುಷ ಸಾಹಿತಿಗಳೂ ಸಹ ಮಹಿಳಾಪರ ಸಾಹಿತ್ಯವನ್ನು ರಚಿಸಿದರೂ ಮಹಿಳೆಯರ ಸಾಹಿತ್ಯದ ನೈಜತೆ ಇಲ್ಲಿ ಕಾಣುವುದು ಬಹಳ ವಿರಳ. ಮೇಲ್ನೋಟಕ್ಕೆ, ಸಮಕಾಲೀನ ಮುಸ್ಲಿಂ ಲೇಖಕರಿಗೂ ಮತ್ತು ಹಿಂದೆ ಬರೆಯುತ್ತಿದ್ದ ಮುಸ್ಲಿಂ ಲೇಖಕರಿಗೂ ಅಷ್ಟೇನೂ ವ್ಯತ್ಯಾಸವಿಲ್ಲ ಎಂದು ಅನ್ನಿಸಿದರೂ ಕೆಲವು ವ್ಯತ್ಯಾಸಗಳು ಸ್ಪಷ್ಟವಾಗಿ ಕಾಣುತ್ತವೆ. ಉದಾಹರಣೆಗೆ ಸಾರಾ ಅಬೂಬಕ್ಕರ್ ಅವರ ಸಾಹಿತ್ಯಕ್ಕೂ, ಹಂಝ ಮಲಾರ್, ಏ.ಕೆ.ಕುಕ್ಕಿಲ ಅವರ ಸಾಹಿತ್ಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಸಾರಾ ಅವರು ಕಣ್ಣಿಗೆ ಚುಚ್ಚುವಂತೆ ಸಮಾಜದ ಸ್ತ್ರೀಯರ ಶೋಷಣೆಯ ಕುರಿತು ಸಾಹಿತ್ಯ ರಚಿಸಿದರೆ, ಹಂಝ ಮಲಾರ್, ಏ.ಕೆ.ಕುಕ್ಕಿಲ ಅವರ ಸಾಹಿತ್ಯದಲ್ಲಿ ತಣ್ಣನೆಯ ಭಾವ ಕಂಡುಬರುತ್ತದೆ. ಈ ಎಲ್ಲಾ ಸಾಹಿತಿಗಳು ಮುಸ್ಲಿಂ ಸಮಾಜದ ಕುರಿತಂತೆ ಸಾಹಿತ್ಯ ರಚನೆ ಮಾಡಿದರೂ ಭಾವನೆಗಳ ಅಭಿವ್ಯಕ್ತಿಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. "ಒಬ್ಬ ವ್ಯಕ್ತಿಯು ಘಟನೆಗಳನ್ನು ನೋಡುವ ಕ್ರಮವು ಆ ವ್ಯಕ್ತಿಯ ದೈಹಿಕ, ಮಾನಸಿಕ ಲಕ್ಷಣಗಳಿಂದ ಪ್ರಭಾವಿತವಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬರ ಅನುಭವವೂ ಅನನ್ಯ. ಸ್ತ್ರೀಯರು ಮತ್ತು ಪುರುಷರು ಅನೇಕ ಅನುಭವಗಳನ್ನು ಭಿನ್ನ ರೀತಿಯಿಂದ ಪಡೆಯುವುದು ಸಾಧ್ಯ." ಹೀಗೆ ಕರಾವಳಿಯ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣವನ್ನು ಅಧ್ಯಯನಕ್ಕೆ ಒಳಪಡಿಸುವುದು ಈ ಸಂಶೋಧನೆಯ ಆಶಯವಾಗಿದೆ.

ಅಧ್ಯಯನದ ಉದ್ದೇಶ:

'ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ' ಎಂಬ ವಿಷಯವು ಸಮಾಜದ ಮುಸ್ಲಿಂ ಮಹಿಳೆಯರ ಸಮಸ್ಯೆಗಳು, ಅವರ ಸಾಮಾಜಿಕ ಸ್ಥಿತಿಗತಿಗಳು, ಭಾವನೆಗಳು,

ಅಭಿವ್ಯಕ್ತಿಗಳು, ಮಾತ್ರವಲ್ಲದೆ ಸಮಾಜದ ಎಲ್ಲಾ ಸಮುದಾಯದ ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವನ್ನು ಒಳಗೊಂಡಿದೆ.

ಸಮಾಜದಲ್ಲಿ ಹೆಣ್ಣು ಹಲವು ವಿಧಗಳಿಂದ ಶೋಷಣೆಗೆ ಒಳಗಾಗಿದ್ದಾಳೆ, ಒಳಗಾಗುತ್ತಿದ್ದಾಳೆ. ಹೆಣ್ಣಿನ ಸ್ಥಿತಿ ಶೋಚನೀಯವಾಗಿದೆ. ಮಹಿಳೆಯೊಬ್ಬಳು ಕುಟುಂಬದಲ್ಲಿ, ಸಮಾಜದಲ್ಲಿ ಬದುಕಿ ಬಾಳಬೇಕಾದರೆ ಹಲವಾರು ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತಿಗಳಾದ ಸಾರಾ ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞಿ, ಫಕೀರ್ ಮಹಮ್ಮದ್ ಕಟ್ಪಾಡಿ, ಶಹನಾಝ್ ಎಂ, ಹಂಝ ಮಲಾರ್, ಅಬ್ದುಲ್ ಕಾದರ್ ಕುಕ್ಕಿಲ ಮೊದಲಾದವರು ತಮ್ಮ ಕಾದಂಬರಿಗಳಲ್ಲಿ ವಿವಿಧ ಧರ್ಮಗಳ ಮಹಿಳೆಯರು ಎದುರಿಸುವ ಕಷ್ಟಗಳು, ಅದರಲ್ಲೂ ವಿಶೇಷವಾಗಿ ಮುಸ್ಲಿಂ ಮಹಿಳೆಯರ ಕಷ್ಟಕಾರ್ಪಣ್ಯಗಳು, ಮುಸ್ಲಿಂ ಸಂವೇದನೆ ಹಾಗೂ ಮಹಿಳಾಪರ ಕಾಳಜಿಯನ್ನು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ತಿಳಿಯುವ ಉದ್ದೇಶವನ್ನು ಒಳಗೊಂಡಿದೆ.

ಮಹಿಳೆಗೆ ಶಿಕ್ಷಣವು ಅತಿ ಅವಶ್ಯಕವಾದದ್ದು. ಶಿಕ್ಷಣದಿಂದ ವಂಚಿತಳಾದ ಮಹಿಳೆ ಹಲವಾರು ಸೌಲಭ್ಯಗಳಿಂದ ವಂಚಿತಳಾಗುತ್ತಾಳೆ. ಹೆಣ್ಣೊಬ್ಬಳು ವಿದ್ಯೆ ಕಲಿತರೆ ತನ್ನ ಕುಟುಂಬವನ್ನು, ಸಮಾಜವನ್ನು ಉತ್ತಮ ರೀತಿಯಲ್ಲಿ ನಿಭಾಯಿಸಬಲ್ಲಳು. ವಿದ್ಯಾವಂತಳಾಗಿದ್ದರೆ ಆಕೆ ಯಾವುದಾದರೂ ವೃತ್ತಿಯನ್ನು ಕೈಗೊಂಡು ಆರ್ಥಿಕವಾಗಿ ತನ್ನ ಕುಟುಂಬಕ್ಕೆ, ಸಂಸಾರಕ್ಕೆ ನೆರವಾಗಬಲ್ಲಳು. ಯಾವುದೇ ಸಂದರ್ಭದಲ್ಲಿ ಅಥವಾ ಸನ್ನಿವೇಶದಲ್ಲಿ ಸರಿಯಾದ ನಿರ್ಧಾರವನ್ನು ಕೈಗೊಳ್ಳುವಲ್ಲಿ ಯಶಸ್ವಿಯಾಗಬಲ್ಲಳು. ತನ್ನ ಮನಸ್ಸಿನ ನೋವನ್ನು ತನ್ನ ಜೀವನದ ಅನುಭವಗಳನ್ನು ಸಾಹಿತ್ಯದ ಮೂಲಕ ಹೇಗೆ ವ್ಯಕ್ತಪಡಿಸಬಲ್ಲಳು ಎಂಬುದನ್ನು ಇಲ್ಲಿ ಸಂಶೋಧನೆಗೆ ಒಳಪಡಿಸಲಾಗಿದೆ.

ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತಿಗಳು ವೈವಾಹಿಕ ಜೀವನದಲ್ಲಿ ಮಹಿಳೆಯೊಬ್ಬಳು ಗೃಹಿಣಿಯಾಗಿ, ವಿಧವೆಯಾಗಿ, ವಿಚ್ಛೇದಿತೆಯಾಗಿ, ಪರಿತ್ಯಕ್ತೆಯಾಗಿ ಹೇಗೆ ಬಾಳುತ್ತಾಳೆ ಎಂಬುದನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ವೈವಾಹಿಕ ಜೀವನದಲ್ಲಿ ಏರುಪೇರಾದಾಗ ಮಹಿಳೆಯು ಯಾವ ರೀತಿ ತನ್ನ ಜೀವನವನ್ನು ಸಮತೋಲನದಿಂದ ಸಾಗಿಸಲು ಪ್ರಯತ್ನಿಸುತ್ತಾಳೆ ಎನ್ನುವ ಚಿತ್ರಣ ಕಾದಂಬರಿಗಳಲ್ಲಿ ಕಾಣಸಿಗುತ್ತದೆ. ಹೆಣ್ಣಿನ ವೈವಾಹಿಕ ಜೀವನದ ವಿವಿಧ ಮುಖಗಳನ್ನು ಅರಿಯುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ.

'ಹೆಣ್ಣು' ಒಂದು ಭೋಗದ ವಸ್ತು ಎಂದು ತಿಳಿದು, ಆಕೆಯನ್ನು ದೈಹಿಕವಾಗಿ ದುಡಿಸಿ, ಮಾನಸಿಕವಾಗಿ ಹಿಂಸಿಸುವ ಈ ಸಮಾಜದ ಕ್ರೌರ್ಯವನ್ನು ಮುಸ್ಲಿಂ ಬರಹಗಾರರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಅದೇ ರೀತಿ ಹೆಣ್ಣನ್ನು ಗೌರವಿಸುವ, ಆಕೆಯ ಭಾವನೆಗಳಿಗೆ ಸ್ಪಂದಿಸುವ ಕೌಟುಂಬಿಕ ವ್ಯವಸ್ಥೆಯ ಚಿತ್ರಣವನ್ನೂ ಈ ಲೇಖಕರು ನೀಡಿದ್ದಾರೆ. ಹೆಣ್ಣನ್ನು ತನಗೆ ಬೇಕಾದಂತೆ ಬಳಸಿ ಬೇಡವಾದಾಗ ಆಕೆಗೆ 'ವಿಚ್ಛೇದನ' ಕೊಟ್ಟು ಧರ್ಮದ ಹೆಸರಿನಲ್ಲಿ ಬಹುಪತ್ನಿತ್ವವನ್ನು ದುರುಪಯೋಗಪಡಿಸಿ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಹೆಣ್ಣಿನ ಮೇಲೆ ದೌರ್ಜನ್ಯ ನಡೆಸಲಾಗುತ್ತದೆ. ಸಮಾಜದ ಪ್ರತಿಯೊಬ್ಬ ಮಹಿಳೆಯೂ ತನ್ನಲ್ಲಿ ಸ್ವಪ್ರಜ್ಞೆಯನ್ನು ಬೆಳೆಸಿ ಇದರಿಂದ ಆಕೆಯ ಮೇಲಾಗುವ ದೌರ್ಜನ್ಯದಿಂದ ಮುಕ್ತಳಾಗುವ ಪ್ರಯತ್ನವನ್ನು ಮಾಡಬೇಕು. ತಾನು ಪ್ರಗತಿ ಪಥದಲ್ಲಿ ಸಾಗಬೇಕು. ಯಾವ ಹೆಣ್ಣೂ ಕ್ರೌರ್ಯಕ್ಕೆ ಒಳಗಾಗಬಾರದು ಎನ್ನುವ ಆಶಯವನ್ನು ಈ ಕಾದಂಬರಿಗಳು ಹೇಗೆ ನಿರೂಪಿಸಿವೆ ಎಂಬುದನ್ನು ಅಧ್ಯಯನದ ಮೂಲಕ ತಿಳಿಯುವ ಉದ್ದೇಶವನ್ನು ಪ್ರಸ್ತುತ ಸಂಶೋಧನಾ ಅಧ್ಯಯನವು ಹೊಂದಿದೆ.

'ಹೆಣ್ಣು ಸಂಸಾರದ ಕಣ್ಣು'. ಆಕೆ ಆರೋಗ್ಯವಾಗಿದ್ದರೆ ಇಡೀ ಕುಟುಂಬವೇ ಆರೋಗ್ಯವಾಗಿದ್ದಂತೆ. ಆದರೆ ಎಷ್ಟೋ ಸಂದರ್ಭಗಳಲ್ಲಿ ಎಲ್ಲರ ಸಂತೋಷಕ್ಕೆ ಕಾರಣಳಾದ ಮಹಿಳೆಯು ತಾನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಅನಾರೋಗ್ಯದಿಂದ ಕೊರಗುತ್ತಿರುತ್ತಾಳೆ. ಎಷ್ಟೋ ಹೆಣ್ಣು ಮಕ್ಕಳು ಸಣ್ಣ ಪ್ರಾಯದಲ್ಲಿ ವಿವಾಹವಾಗಿ ತಾಯಂದಿರಾಗಿ ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಬಡತನದ ಕಾರಣದಿಂದ ಮಹಿಳೆಯರು ಸರಿಯಾದ ಸಮಯಕ್ಕೆ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯದೆ ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಕೆಲವರು ವೈಜ್ಞಾನಿಕವಾಗಿ ತೆರೆದ ಮನಸ್ಸಿನಿಂದ ಹೆಣ್ಣಿಗೆ ವೈದ್ಯಕೀಯ ಚಿಕಿತ್ಸೆಯನ್ನು ನೀಡಿದರೆ, ಹಲವಾರು ಸಂದರ್ಭಗಳಲ್ಲಿ ವೈದ್ಯಕೀಯ ಚಿಕಿತ್ಸೆಗಳಿಗೆ ಒಳಗಾಗದೆ ಮೂಢನಂಬಿಕೆಗೆ ಮೊರೆಹೋಗುತ್ತಾರೆ. ಹೀಗೆ ಮಾನಸಿಕ ಹಾಗೂ ದೈಹಿಕ ಆರೋಗ್ಯ ಎರಡನ್ನೂ ಕಳೆದುಕೊಳ್ಳುತ್ತಾರೆ. ಕುಟುಂಬದಲ್ಲಿ ಮಹಿಳೆಯರ ಆರೋಗ್ಯದತ್ತ ಯಾರೂ ಗಮನಹರಿಸುವುದಿಲ್ಲ. ಮಹಿಳೆಯರ ಆರೋಗ್ಯದ ಕಡೆಗೆ ಬೆಳಕು ಚೆಲ್ಲುವುದು ಪ್ರಸ್ತುತ ಸಂಶೋಧನೆಯ ಆಶಯವಾಗಿದೆ.

ಮಹಿಳೆಯು ಆರ್ಥಿಕವಾಗಿ ಸ್ವತಂತ್ರಳಾಗಲು ಏನಾದರೊಂದು ಕೆಲಸ ಮಾಡಬೇಕಾಗುತ್ತದೆ. ಹೆಚ್ಚಿನ ಮಹಿಳೆಯರು ಅವಿದ್ಯಾವಂತರಾಗಿದ್ದು, ಬೀಡಿ ಕಟ್ಟುವಂತಹ ಕಸುಬನ್ನು ಹೆಚ್ಚಾಗಿ ಮಾಡುತ್ತಾರೆ. ಇತ್ತೀಚೆಗೆ ವಿದ್ಯಾವಂತ ಮಹಿಳೆಯರು ಕೆಲವೊಂದು ವೃತ್ತಿಗಳನ್ನು ಆಯ್ಕೆ ಮಾಡಿ ಹೊರಗಡೆ

ಉದ್ಯೋಗಕ್ಕೆ ಹೋಗುವುದನ್ನು ಕಾಣಬಹುದು. ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತಿಗಳು ಚಿತ್ರಿಸಿದ ಮಹಿಳೆಯರ ಕಸುಬುಗಳು - ಅದರಲ್ಲೂ ವಿದ್ಯಾವಂತ ಹಾಗೂ ಅವಿದ್ಯಾವಂತ ಮಹಿಳೆಯರು ಆರಿಸಿಕೊಂಡ ವೃತ್ತಿ ಹಾಗೂ ಕಸುಬುಗಳು, ಇವುಗಳನ್ನು ನಿರ್ವಹಿಸುವಾಗ ಎದುರಾಗುವ ಸಮಸ್ಯೆಗಳನ್ನು ಸಂಶೋಧನೆಗೆ ಒಳಪಡಿಸುವ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ.

ಒಟ್ಟಿನಲ್ಲಿ ಈ ಸಂಶೋಧನೆಯು ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಮಹಿಳಾ ಪ್ರತಿನಿಧೀಕರಣ, ವೈವಾಹಿಕ ಜೀವನ, ಮಹಿಳಾ ದೌರ್ಜನ್ಯ, ಮಹಿಳಾ ಆರೋಗ್ಯ ಮತ್ತು ಮಹಿಳಾ ಉದ್ಯೋಗಗಳ ಕುರಿತು ಸಾಹಿತಿಗಳ ಹಾಗೂ ಸಮಾಜದ ನಿಲುವುಗಳನ್ನು ತಿಳಿದುಕೊಳ್ಳುವ ಉದ್ದೇಶವನ್ನು ಒಳಗೊಂಡಿದೆ. ಕಾದಂಬರಿಕಾರರಿಗೆ ಸಮಾಜದ ಮಹಿಳೆಯರ ಬಗ್ಗೆ ಕಾಳಜಿಯಿದ್ದು, ಮಹಿಳೆಯು ಜೀವನದಲ್ಲಿ ಅನುಭವಿಸುವ ನೋವು ಕಷ್ಟಗಳ ಬಗ್ಗೆ ವಿಷಾದವಿದೆ. ಈ ವಿಷಾದವನ್ನು ತಮ್ಮ ಕಾದಂಬರಿಗಳಲ್ಲಿ ಕರಾವಳಿ ಕನ್ನಡ ಮುಸ್ಲಿಂ ಸಾಹಿತಿಗಳು ಚಿತ್ರಿಸಿದ್ದಾರೆ. ಈ ಮೂಲಕ ಪ್ರಸ್ತುತ ಸಮಾಜದ ಮಹಿಳೆಯರು ಶೋಷಣೆಗೆ, ದೌರ್ಜನ್ಯಕ್ಕೆ ಒಳಗಾದ ರೀತಿಯನ್ನು, ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿದುಕೊಳ್ಳುವುದು ಈ ಸಂಶೋಧನೆಯ ಉದ್ದೇಶವಾಗಿದೆ.

ವ್ಯಾಪ್ತಿ:

'ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ' ವಿಷಯವು ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಮಹಿಳಾ ಪ್ರತಿನಿಧೀಕರಣ, ವೈವಾಹಿಕ ಜೀವನ, ಮಹಿಳಾ ದೌರ್ಜನ್ಯ, ಮಹಿಳಾ ಆರೋಗ್ಯ, ಮಹಿಳೆಯರ ಉದ್ಯೋಗ ಎಂಬ ಅಂಶಗಳನ್ನು ಒಳಗೊಂಡಿದೆ.

ಪ್ರಸ್ತುತ ಅಧ್ಯಯನವು ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಪ್ರಕಟಗೊಂಡಿರುವ ಮುಸ್ಲಿಂ ಲೇಖಕರ ಸಾಹಿತ್ಯದ ಅವಲೋಕನದ ಹಿನ್ನೆಲೆಯನ್ನು ಮಹಿಳಾ ಅಧ್ಯಯನದ ನೆಲೆಯಲ್ಲಿ ಒಳಗೊಂಡಿದೆ. ಕರಾವಳಿ ಕನ್ನಡ ಮುಸ್ಲಿಂ ಲೇಖಕರು, ವಿಶೇಷವಾಗಿ ಸಾರಾ ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞಿ, ಫಕೀರ್ ಮಹಮ್ಮದ್ ಕಟ್ಪಾಡಿ, ಶಹನಾಝ್ ಎಂ, ಹಂಝ ಮಲಾರ್, ಅಬ್ದುಲ್ ಖಾದರ್ ಕುಕ್ಕಿಲ ಇವರ ಕೃತಿಗಳಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣದ ಕುರಿತು ವಿವೇಚನೆ ಮಾಡಲಾಗಿದೆ. ಅಧ್ಯಯನದ ವ್ಯಾಪ್ತಿಯು ವಿಶಾಲವಾಗುವುದರಿಂದ ಪ್ರಸ್ತುತ ಅಧ್ಯಯನಕ್ಕಾಗಿ ಕೇವಲ ಆರು ಮಂದಿ ಕರಾವಳಿ ಮುಸ್ಲಿಂ

ಲೇಖಕರ ಕಥನ ಸಾಹಿತ್ಯವನ್ನು ಆರಿಸಲಾಗಿದೆ. ಇಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ ಸಿದ್ಧಾಂತಗಳಿಗೆ ಅನುಗುಣವಾಗಿ ಪ್ರಾತಿನಿಧಿಕ ಎನ್ನುವಂತಹ ಸ್ತ್ರೀತ್ವದ ಪ್ರತಿನಿಧೀಕರಣವನ್ನು ವಸ್ತುವನ್ನಾಗಿಟ್ಟುಕೊಂಡ ಪ್ರಮುಖ ಕಾದಂಬರಿಗಳನ್ನು ಹಾಗೂ ಕಥಾಸಂಕಲನಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಹೀಗೆ ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣವನ್ನು ಲಕ್ಷ್ಯದಲ್ಲಿಟ್ಟುಕೊಂಡು ಕಥನ ಸಾಹಿತ್ಯದಲ್ಲಿ ಕಂಡುಬರುವ ಸ್ತ್ರೀತ್ವದ ಅಂಶಗಳತ್ತ ಗಮನ ಹರಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕಾಗಿ ಒಟ್ಟು ೧೩ ಕಾದಂಬರಿಗಳು ಹಾಗೂ ೨೯ ಕಥಾ ಸಂಕಲನಗಳನ್ನು ಆಯ್ದುಕೊಳ್ಳಲಾಗಿದೆ.

'ಮಹಿಳಾ ಪ್ರತಿನಿಧೀಕರಣದ ನೆಲೆಗಳು' ಅಧ್ಯಾಯದಿಂದ ಆರಂಭಿಸಿ 'ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಉದ್ಯೋಗ' ವರೆಗೆ ವಿವಿಧ ಆಯಾಮಗಳನ್ನೊಳಗೊಂಡ ಅಧ್ಯಾಯಗಳ ವ್ಯಾಪ್ತಿಯನ್ನು ಪ್ರಸ್ತುತ ಮಹಾಪ್ರಬಂಧವು ಹೊಂದಿದೆ.

ಅಧ್ಯಯನದ ವೈಧಾನಿಕತೆ:

'ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ' ಎಂಬ ಸಂಶೋಧನಾ ಅಧ್ಯಯನದಲ್ಲಿ ವಿವರಣಾತ್ಮಕ, ವಿಶ್ಲೇಷಣಾತ್ಮಕ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಸಾರಾ ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ, ಶಹನಾಝ್ ಎಂ, ಹಂಝ ಮಲಾರ್, ಅಬ್ದುಲ್ ಕಾದರ್ ಕುಕ್ಕಿಲ ಇವರ ಕಾದಂಬರಿಗಳನ್ನು ಹಾಗೂ ಕಥಾ ಸಂಕಲನಗಳನ್ನು ಈ ಸಂಶೋಧನೆಗೆ ಮೂಲ ಆಕರಗಳಾಗಿ ಬಳಸಲಾಗಿದೆ. ಕರಾವಳಿ ಮುಸ್ಲಿಂ ಸಾಹಿತಿಗಳ ಕೃತಿಗಳು, ಸ್ತ್ರೀವಾದಿ ವಿಮರ್ಶೆ, ಬರಹಗಳನ್ನು ಈ ಅಧ್ಯಯನದ ಉದ್ದೇಶಕ್ಕಾಗಿ ವಿಶ್ಲೇಷಿಸಲಾಗಿದೆ.

ಸಾಹಿತ್ಯ ರಚನೆ ಎಂದರೆ ಸುಲಭದ ಕೆಲಸವಲ್ಲ. ಮುಕ್ತವಾಗಿ ಸಾಹಿತ್ಯ ರಚನೆ ಮಾಡಬೇಕಾದರೆ ಅನೇಕ ಟೀಕೆ, ನಿಂದನೆಗಳಿಗೆ ಗುರಿಯಾಗಬೇಕಾಗುತ್ತದೆ. ಈವರೆಗೆ ಹಲವಾರು ಮುಸ್ಲಿಂ ಲೇಖಕರು ಕನ್ನಡ ಕಥನ ಸಾಹಿತ್ಯಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ಆದರೆ ಎಲ್ಲಾ ಲೇಖಕರು ಭಿನ್ನಭಿನ್ನ ಕಾಲಘಟ್ಟದಲ್ಲಿ ತಮ್ಮ ಸುತ್ತಲಿನ ಪರಿಸರದ ಸನ್ನಿವೇಶಕ್ಕೆ ಅನುಗುಣವಾಗಿ, ಅನೇಕ ಒತ್ತಡಗಳಿಂದ ಸಾಹಿತ್ಯ ರಚನೆ ಮಾಡಿರುವುದನ್ನು ಕಾಣಬಹುದು. ಇಲ್ಲಿ ಮುಸ್ಲಿಂ ಸಾಹಿತಿಗಳು ಎಲ್ಲವನ್ನೂ ಮುಕ್ತವಾಗಿ ಚರ್ಚಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ಸಮಾಜವನ್ನು ಎದುರುಹಾಕಿಕೊಂಡು ಸಾಹಿತ್ಯ ರಚನೆ

ಮಾಡುವುದು ಬಹಳ ಕಷ್ಟ. ಸಮಾಜದ ಕಟ್ಟುಕಟ್ಟಳೆಗಳನ್ನು ಮೀರದೆ, ಸಮಸ್ಯೆಗಳನ್ನು ಸಾಹಿತ್ಯದಲ್ಲಿ ವ್ಯಕ್ತಪಡಿಸುವುದು ಸುಲಭದ ಮಾತಲ್ಲ. ಸಾರಾ ಅಬೂಬಕ್ಕರ್, ಫಕೀರ್ ಮಹಮ್ಮದ್ ಕಟ್ಪಾಡಿ, ಬೊಳುವಾರು ಮಹಮ್ಮದ್ ಕುಂಞ್‌ರಂತಹ ಸಾಹಿತಿಗಳು ಸಮಾಜದಲ್ಲಿ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳನ್ನು ಮುಕ್ತವಾಗಿ ಚರ್ಚಿಸಿದರೂ ಶಹನಾಝ್ ಎಂ, ಹಂಝ ಮಲಾರ್, ಏ.ಕೆ. ಕುಕ್ಕಿಲರಂತಹ ಸಾಹಿತಿಗಳು ಧಾರ್ಮಿಕ ಚೌಕಟ್ಟಿನಲ್ಲಿ ಇದ್ದುಕೊಂಡೇ ಸಮಾಜದ ಅನಿಷ್ಟಗಳನ್ನು ಕಥೆಗಳಲ್ಲಿ ಚಿತ್ರಿಸಿದ್ದಾರೆ. ಅಲ್ಲದೆ ಮುಸ್ಲಿಂ ಸಮಾಜದಲ್ಲೂ ಹೆಣ್ಣಿಗೆ ಉತ್ತಮ ಸ್ಥಾನಮಾನವಿದೆ ಎಂಬುದನ್ನು ಚಿತ್ರಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಕೆಲವೊಂದು ಸಾಮಾಜಿಕ ಪಿಡುಗುಗಳ ಬಗ್ಗೆ, ಮಹಿಳೆಯರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿದೆ. ಮುಂದಿನ ಸಂಶೋಧಕರಿಗೆ ಈ ಕೃತಿಯು ಸಹಾಯವಾಗಬಲ್ಲದು ಎಂಬ ಆಶಯದೊಂದಿಗೆ 'ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ' ಎಂಬ ವಿಷಯದ ಬಗ್ಗೆ ಈ ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ.

'ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ' ಎಂಬ ವಿಷಯದ ಅಧ್ಯಯನಕ್ಕಾಗಿ ಒಟ್ಟು ಐದು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ – ೧ 'ಮಹಿಳಾ ಪ್ರತಿನಿಧೀಕರಣದ ನೆಲೆಗಳು' ಅಧ್ಯಾಯದಲ್ಲಿ ಕುಟುಂಬ ಹಾಗೂ ಸಮಾಜದಲ್ಲಿ ಮಹಿಳೆಯನ್ನು ಯಾವ ರೀತಿ ಗ್ರಹಿಸಲಾಗುತ್ತದೆ ಎಂಬುದನ್ನು ಚರ್ಚಿಸಲಾಗಿದೆ. ಕುಟುಂಬದಲ್ಲಿ ಹೆಣ್ಣಿನ ಕಷ್ಟಕಾರ್ಪಣ್ಯಗಳು, ಹೆಣ್ಣಿನ ಜವಾಬ್ದಾರಿ, ಸ್ಥಾನಮಾನಗಳು ಹಾಗೂ ಇವೆಲ್ಲವನ್ನು ನಿರ್ವಹಿಸುವಾಗ ಹಲವಾರು ಸಮಸ್ಯೆಗಳನ್ನು ಹೆಣ್ಣು ಎದುರಿಸಬೇಕಾಗುತ್ತದೆ. ಕುಟುಂಬದಲ್ಲಿ ಹೆಣ್ಣಿನ ಮೇಲೆ ಹೇರಲಾಗುವ ತ್ಯಾಗ, ಸಹನೆಯ ಗುಣಗಳು ಹೆಣ್ಣನ್ನು ಇನ್ನಷ್ಟು ಕಷ್ಟಕೋಟಲೆಗಳಲ್ಲಿ ಮುಳುಗಿಸುತ್ತವೆ. ಹೆಣ್ಣು ಎಷ್ಟೇ ಕಷ್ಟ ಬಂದರೂ ಆಕೆಯ ಸಣ್ಣಪುಟ್ಟ ತಪ್ಪುಗಳಿಗೆ ಆಕೆಗೆ ಸಿಗುವ ಶಿಕ್ಷೆ ಎಂದರೆ ವಿಚ್ಛೇದನವಾಗಿರುತ್ತದೆ. ಮುಸ್ಲಿಂ ಕುಟುಂಬದಲ್ಲಿ ಹೆಣ್ಣು-ಗಂಡಿನ ಸಮಸ್ಯೆಗೆ ಪರಿಹಾರವನ್ನು ಸೂಚಿಸಲು ಯಾವ ರೀತಿ ತಲಾಕ್ ಬಳಸಲಾಗುತ್ತದೆ ಎಂಬ ಚಿತ್ರಣವನ್ನು ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಿಂದ ಗ್ರಹಿಸಬಹುದು. ಜೊತೆಯಲ್ಲಿ ಬಾಳಲಾಗದಿದ್ದರೆ ಹೆಣ್ಣಿಗೂ ಸಹ ವಿಚ್ಛೇದನ ಪಡೆಯುವ ಅವಕಾಶವಿರುತ್ತದೆ. ಕುಟುಂಬದಲ್ಲಿ ಹೆಣ್ಣು ಕಪ್ಪು ಬಣ್ಣದ ಕಾರಣದಿಂದಲೂ ಅವಜ್ಞೆಗೆ ಒಳಗಾಗುತ್ತಾಳೆ. ಧರ್ಮದ ಕಾರಣವನ್ನಿಟ್ಟು

ಬಹುಪತ್ನಿತ್ವವನ್ನು ಕುಟುಂಬದಲ್ಲಿ ದುರುಪಯೋಗಪಡಿಸಿಕೊಳ್ಳುವುದನ್ನು ಮುಸ್ಲಿಂ ಕನ್ನಡ ಸಾಹಿತ್ಯದಿಂದ ಗ್ರಹಿಸಬಹುದು.

ಸಾಮಾಜಿಕ ನೆಲೆಯಲ್ಲಿ ಹೆಣ್ಣನ್ನು ಗ್ರಹಿಸುವಾಗಲೂ ಲಿಂಗ ಅಸಮಾನತೆ ಕಂಡುಬರುತ್ತದೆ. ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ ಎಂದು ಗಂಡಿಗೆ ಎಲ್ಲಾ ರೀತಿಯಲ್ಲೂ ಮೇಲ್ದರ್ಜೆಯ ಸ್ಥಾನವನ್ನು ನೀಡಲಾಗುತ್ತದೆ. ಸ್ತ್ರೀಯರು ಬುದ್ಧಿಹೀನರು, ಬಲಹೀನರು ಎಂದು ಅವರನ್ನು ಕಡೆಗಣಿಸಲಾಗುತ್ತದೆ. ಸಮಾಜದಲ್ಲಿ ಮಹಿಳೆಯರು ಎದುರಿಸುವ ಮತ್ತೊಂದು ಸಮಸ್ಯೆಯೆಂದರೆ ಬಡತನ. ಇಲ್ಲಿ ಬಡ ಹೆಣ್ಣು ಮಕ್ಕಳು ಸಮಾಜದಲ್ಲಿ ಸಿರಿವಂತರಿಂದ ಯಾವ ರೀತಿ ಶೋಷಣೆಗೆ ಒಳಗಾಗುತ್ತಾರೆ ಎಂಬುದು ಗ್ರಹಿತವಾಗುತ್ತದೆ. ವರದಕ್ಷಿಣೆಯ ಪಿಡುಗಿನಿಂದಾಗಿ ಹೆಣ್ಣುಮಕ್ಕಳು ಶ್ರೀಮಂತರ ಗುಲಾಮರಾಗಬೇಕಾಗುತ್ತದೆ. ಸಮಾಜದ ಜನರಲ್ಲಿ ಬೇರೂರಿರುವ ಮೂಢನಂಬಿಕೆಯೂ ಸಹ ಹೆಣ್ಣನ್ನು ಕಷ್ಟದ ಕೂಪಕ್ಕೆ ತಳ್ಳುತ್ತದೆ. ಮಹಿಳೆಯ ಕೌಟುಂಬಿಕ ನೆಲೆಯ ಸಂಬಂಧಗಳನ್ನು, ಸಾಮಾಜಿಕ ಜವಾಬ್ದಾರಿಗಳನ್ನು, ಕುಟುಂಬ ಹಾಗೂ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ, ಅಲ್ಲಿ ಹೆಣ್ಣನ್ನು ನೋಡುವ ದೃಷ್ಟಿಕೋನವನ್ನು ಕರಾವಳಿ ಕಥನ ಸಾಹಿತ್ಯದ ಗ್ರಹಿಕೆಯ ಮೂಲಕ ಅಧ್ಯಯನ ನಡೆಸಲಾಗುವುದು.

ಅಧ್ಯಾಯ - ೧ 'ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬ'ದಲ್ಲಿ ಮಹಿಳೆಯು ಗೃಹಿಣಿಯಾಗಿ, ವಿಧವೆಯಾಗಿ, ವಿಚ್ಛೇದಿತೆಯಾಗಿ, ಪರಿತ್ಯಕ್ತೆಯಾಗಿ ಸಮಾಜದಲ್ಲಿ ಎದುರಿಸುವ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ. ಸಮಾಜದಲ್ಲಿ ಅಥವಾ ಕುಟುಂಬದಲ್ಲಿ ಒಬ್ಬಳು ಗೃಹಿಣಿ ತನ್ನ ಇಡೀ ಕುಟುಂಬವನ್ನು ನಿಭಾಯಿಸಿಕೊಂಡು ಹೋಗುವ ಸಂದರ್ಭದಲ್ಲಿ ಆಕೆ ಪತ್ನಿಯಾಗಿ, ತಾಯಿಯಾಗಿ, ಅತ್ತಿಗೆಯಾಗಿ, ಅಜ್ಜಿಯಾಗಿ ಹಾಗೂ ಅತ್ತೆಯಾಗಿ ಹೀಗೆ ಹಲವಾರು ಪಾತ್ರಗಳ ಮೂಲಕ ತನ್ನ ಜೀವನದ ಪಯಣವನ್ನು ಸಾಗಿಸಬೇಕಾಗುತ್ತದೆ ಹಾಗೂ ಅನೇಕ ಜವಾಬ್ದಾರಿಗಳನ್ನು ಸುಸೂತ್ರವಾಗಿ ನಿರ್ವಹಿಸಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ವಿಧವೆ, ವಿಚ್ಛೇದಿತೆ ಹಾಗೂ ಪರಿತ್ಯಕ್ತೆಯ ಜೀವನ ಬಹಳ ಕಷ್ಟಕರವಾಗಿರುತ್ತದೆ. ಇವರ ಜವಾಬ್ದಾರಿಯನ್ನು ಕುಟುಂಬದ ಸದಸ್ಯರು ಹೊರಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಈ ಮಹಿಳೆಯರು ಸಮಾಜದ ನಿಂದನೆಗಳಿಗೆ ಒಳಗಾಗಿ ಬಹಳ ಕಷ್ಟದ ಜೀವನ ಸಾಗಿಸಬೇಕಾಗುತ್ತದೆ. ತಮ್ಮ ದಿನನಿತ್ಯದ ಮೂಲಭೂತ ಬೇಡಿಕೆಗಳಿಗಾಗಿ ಇವರು ಆರ್ಥಿಕವಾಗಿ ಸ್ವಾವಲಂಬಿಗಳಾಗಿರಬೇಕಾಗಿರುತ್ತದೆ. ಮಹಿಳೆಯ ಆದರ್ಶಮಯ ದಾಂಪತ್ಯದ ಕಲ್ಪನೆ ವಾಸ್ತವ ಜಗತ್ತಿನಲ್ಲಿ ದುರ್ಬಲವಾಗಿರುವುದನ್ನು ಕಾಣಬಹುದು. ಸಮಾಜದಲ್ಲಿ ವಿಧವೆ, ವಿಚ್ಛೇದಿತೆ ಹಾಗೂ

ಪರಿತ್ಯಕ್ತೆಯನ್ನು ಕೀಳಾಗಿ ಕಂಡು ಆಕೆಯ ಅಸಹಾಯಕತೆಯ ಲಾಭವನ್ನು ಪಡೆಯುವ ಕೀಳು ಮನೋಭಾವವನ್ನು ಹೊಂದಿರುವ ಅನೇಕ ಅನಾರೋಗ್ಯಕರ ಮನಸ್ಸಿನ ವ್ಯಕ್ತಿಗಳಿರುತ್ತಾರೆ. ಹೀಗೆ ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ವೈವಾಹಿಕ ಜೀವನದಲ್ಲಿ ಮಹಿಳೆಯ ಸ್ಥಿತಿಗತಿಗಳು ಹಾಗೂ ಸಮಸ್ಯೆಗಳನ್ನು ತಿಳಿದುಕೊಳ್ಳುವ ಉದ್ದೇಶವನ್ನು ಈ ಅಧ್ಯಾಯ ಒಳಗೊಂಡಿದೆ.

ಅಧ್ಯಾಯ – ೩ 'ಕಥನ ಸಾಹಿತ್ಯದಲ್ಲಿ ಮಹಿಳಾ ದೌರ್ಜನ್ಯ' ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿ ಮಹಿಳೆಯನ್ನು ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ದೌರ್ಜನ್ಯಕ್ಕೆ ಒಳಪಡಿಸಿದ್ದನ್ನು ಕರಾವಳಿ ಮುಸ್ಲಿಂ ಕಥನ ಸಾಹಿತಿಗಳು ಮಾರ್ಮಿಕವಾಗಿ ಚಿತ್ರಿಸಿರುವುದನ್ನು ವಿಶ್ಲೇಷಿಸಲಾಗಿದೆ. ಹೆಣ್ಣು ಹುಟ್ಟಿನಿಂದ ಸಾಯುವವರೆಗೆ ದೌರ್ಜನ್ಯಕ್ಕೆ ಒಳಪಡುತ್ತಾಳೆ. ಕುಟುಂಬ ಹಾಗೂ ಸಮಾಜದ ಒಳಗಡೆ ಹೆಣ್ಣು ಹಲವಾರು ಕಾರಣಗಳಿಂದ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ವರದಕ್ಷಿಣೆ, ದೈಹಿಕ ಹಿಂಸೆ, ಸಂತಾನೋತ್ಪತ್ತಿ ಹೀಗೆ ಹಲವಾರು ಕಾರಣಗಳನ್ನಿಟ್ಟು ಹೆಣ್ಣಿನ ಮೇಲೆ ದೌರ್ಜನ್ಯ ನಡೆಸಲಾಗುತ್ತದೆ. ಈ ರೀತಿಯ ದೌರ್ಜನ್ಯಕ್ಕೆ ಹೆಚ್ಚಾಗಿ ಬಡ ಹೆಣ್ಣುಮಕ್ಕಳು ಬಲಿಯಾಗುತ್ತಾರೆ.ಪ್ರತಿಯೊಂದು ಸಂದರ್ಭದಲ್ಲೂ ಹೆಣ್ಣಿಗಾಗುವ ಅನ್ಯಾಯ, ಅವಮಾನಗಳು ಆಕೆಯನ್ನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಜರ್ಜರಿತಳನ್ನಾಗಿಸುತ್ತವೆ. ಹೆಣ್ಣಿನ ಮೇಲಾಗುವ ದೌರ್ಜನ್ಯದ ವಿವಿಧ ಸ್ತರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ - ೪ 'ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಆರೋಗ್ಯ' ದಲ್ಲಿ ಮಹಿಳೆಯ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯದ ಕುರಿತು ಅಧ್ಯಯನ ನಡೆಸಲಾಗಿದೆ. ಬಡ ಕುಟುಂಬದ ಮಹಿಳೆಯರು ಅಪೌಷ್ಟಿಕತೆಯ ಆಹಾರದಿಂದಾಗಿ ಹೆಚ್ಚು ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಮುಸ್ಲಿಂ ಹೆಣ್ಣು ಮಕ್ಕಳು ಅತ್ಯಂತ ಚಿಕ್ಕ ವಯಸ್ಸಿನಲ್ಲಿ ವಿವಾಹವಾಗಿ ಗರ್ಭಿಣಿಯರಾದಾಗ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸುವುದಿಲ್ಲ ಹಾಗೂ ವೈದ್ಯಕೀಯ ಚಿಕಿತ್ಸೆಗೂ ಒಳಗಾಗುವುದಿಲ್ಲ. ಇದರಿಂದ ಅವರ ದೈಹಿಕ ಆರೋಗ್ಯ ಹದಗೆಡಲು ಕಾರಣವಾಗುತ್ತದೆ. ದೈಹಿಕ ಅನಾರೋಗ್ಯದ ಕಾರಣವನ್ನಿಟ್ಟು ಕುಟುಂಬದಲ್ಲಿ ಹೆಣ್ಣನ್ನು ನಿಂದಿಸಿದಾಗ ಆಕೆ ಮಾನಸಿಕವಾಗಿ ಅಸ್ವಸ್ಥಳಾಗುತ್ತಾಳೆ. ಸಮಾಜದಲ್ಲಿ ಮಹಿಳೆಯರು ದೈಹಿಕವಾಗಿ

ಹಾಗೂ ಮಾನಸಿಕವಾಗಿ ಅನಾರೋಗ್ಯ ಪೀಡಿತರಾಗುವುದಕ್ಕೆ ಕಾರಣಗಳು ಹಾಗೂ ಅವುಗಳ ಪರಿಣಾಮಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ - ೫ 'ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಉದ್ಯೋಗ' ಎಂಬ ಅಧ್ಯಾಯದಲ್ಲಿ ವಿದ್ಯಾವಂತ ಮತ್ತು ಅವಿದ್ಯಾವಂತ ಮಹಿಳೆಯರ ವೃತ್ತಿ ಹಾಗೂ ಕಸುಬಿನ ಬಗ್ಗೆ ಅಧ್ಯಯನ ನಡೆಸಲಾಗಿದೆ. ಸಮಾಜದಲ್ಲಿ ಮಹಿಳೆಯರು ವಿವಿಧ ಕಾರಣಗಳಿಂದಾಗಿ ವಿವಿಧ ಉದ್ಯೋಗಗಳನ್ನು ಅವಲಂಬಿಸುತ್ತಾರೆ. ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ವಿವಿಧ ಉದ್ಯೋಗಗಳನ್ನು ಮಾಡಿಕೊಂಡು ಜೀವನ ಸಾಗಿಸುವುದನ್ನು ಕಾಣಬಹುದು. ಬಹುತೇಕ ಕುಟುಂಬಗಳಲ್ಲಿ ಅವಿದ್ಯಾವಂತ ಮಹಿಳೆಯರು ಆರ್ಥಿಕವಾಗಿ ಸ್ವತಂತ್ರರಾಗಲು ಮನೆ ಕೆಲಸ ಮಾಡುವ, ಬೀಡಿ ಕಟ್ಟುವ ಕಸುಬುಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಅದೇ ರೀತಿ ಉನ್ನತ ಶಿಕ್ಷಣ ಪಡೆದ ವಿದ್ಯಾವಂತ ಮಹಿಳೆಯರು ಡಾಕ್ಟರ್, ಶಿಕ್ಷಕಿ, ಪತ್ರಕರ್ತೆಯರಂತಹ ವೃತ್ತಿಗಳಲ್ಲಿ ತೊಡಗುತ್ತಾರೆ. ಈ ರೀತಿಯ ಉದ್ಯೋಗಗಳನ್ನು ಆಯ್ದುಕೊಂಡಾಗ, ಈ ಎಲ್ಲಾ ಮಹಿಳೆಯರು ಸಮಾಜದ ಜನರ ಟೀಕೆ, ನಿಂದನೆಗಳಿಗೆ ಒಳಗಾಗಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮಹಿಳೆಯರ ಶಿಕ್ಷಣಕ್ಕೆ ತಕ್ಕಂತೆ ಅವರ ಉದ್ಯೋಗವೂ ಭಿನ್ನವಾಗಿರುತ್ತದೆ. ಕರಾವಳಿ ಕನ್ನಡ ಮುಸ್ಲಿಂ ಲೇಖಕರು ಮಹಿಳೆಯರ ಕಸುಬುಗಳು ಹಾಗೂ ವೃತ್ತಿಗಳ ಸಮಸ್ಯೆಗಳ ಬಗ್ಗೆ ಕಥನ ಸಾಹಿತ್ಯದಲ್ಲಿ ಯಾವ ರೀತಿ ಬೆಳಕು ಚೆಲ್ಲಿದ್ದಾರೆ ಎಂಬುದನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ಸಮಾರೋಪ'ದಲ್ಲಿ ನಿಯೋಜಿತ ಸಂಶೋಧನೆಯ ಫಲಿತಾಂಶಗಳನ್ನು ಕ್ರೋಢೀಕರಿಸಿ ನೀಡಲಾಗಿದೆ.

ಅನುಬಂಧದಲ್ಲಿ ಪದಗಳ ಅರ್ಥ, ಲೇಖಕರ ಪರಿಚಯ, ಆಕರ ಕೃತಿಗಳು, ಪರಾಮರ್ಶನ ಕೃತಿಗಳ ಪಟ್ಟಿಯನ್ನು ನೀಡಲಾಗಿದೆ.

ಈವರೆಗೆ ನಡೆದಿರುವ ಅಧ್ಯಯನಗಳು:

ಸ್ತ್ರೀತ್ವದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದ ಬಗ್ಗೆ ಇದುವರೆಗೆ ನಡೆದಿರುವ ಅಧ್ಯಯನಗಳು ಹೀಗಿವೆ:

ಕವಿತಾ ರೈ ಬಿ. ಆರ್. ಅವರ 'ಕನ್ನಡ ಮಹಿಳಾ ಕಾದಂಬರಿಗಳಲ್ಲಿ ವಿವಾಹ ಮತ್ತು ಕುಟುಂಬದ ಪರಿಕಲ್ಪನೆ' (ಪಿಹೆಚ್. ಡಿ. ಮಹಾಪ್ರಬಂಧ ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ೨೦೦೩) ಮಹಾಪ್ರಬಂಧವು ವಿವಾಹ ಮತ್ತು ಕುಟುಂಬದ ಪರಿಕಲ್ಪನೆಯ ವಿಭಿನ್ನ ನೆಲೆಗಳನ್ನು ಶೋಧಿಸುವ ಹಾಗೂ ಕುಟುಂಬ ಮತ್ತು ವಿವಾಹ ವ್ಯವಸ್ಥೆಗಳು ಸ್ತ್ರೀಯರ ಬದುಕಿನ ಮೇಲೆ ಪ್ರಭಾವ ಬೀರಿದ ಅಂಶಗಳ ಕುರಿತು ಚರ್ಚಿಸುತ್ತದೆ.

ಇಸ್ಮಾಯಿಲ್ ಎನ್. ಇವರ 'ಕನ್ನಡ ಸಾಹಿತ್ಯದಲ್ಲಿ ಪ್ರತಿಬಿಂಬಿತವಾದ ಇಸ್ಲಾಂ ಸಂಸ್ಕೃತಿ' (ಪಿಹೆಚ್. ಡಿ. ಮಹಾಪ್ರಬಂಧ ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ೧೯೯೫) ಮಹಾಪ್ರಬಂದವು ಕನ್ನಡ ಸಾಹಿತ್ಯ ಕೃತಿಗಳಲ್ಲಿ ಇಸ್ಲಾಂ ಸಂಸ್ಕೃತಿ ಹೇಗೆ ಪ್ರತಿಬಿಂಬಿತವಾಗಿದೆ ಹಾಗೂ ಸಮಾಜದ ಜನರ ಮೇಲೆ ಇದು ಹೇಗೆ ಪ್ರಭಾವ ಬೀರಿದೆ ಎಂಬುದನ್ನು ಕುರಿತು ಚರ್ಚಿಸುತ್ತದೆ.

ಕೋದಂಡರಾಮ ಎನ್. ಕೆ ಅವರ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ' (ಪಿಹೆಚ್. ಡಿ. ಮಹಾಪ್ರಬಂಧ ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ೧೯೯೬) ಮಹಾಪ್ರಬಂಧದಲ್ಲಿ ಸಂಶೋಧನಕಾರರು ಮುಸ್ಲಿಂ ಲೇಖಕಿಯರಾದ ಮಮ್ತಾಜ್, ಸಾರಾ ಅಬೂಬಕ್ಕರ್ ಮತ್ತು ಭಾನುಮುಷ್ತಾಕ್ ಈ ಮೂವರು ಲೇಖಕಿಯರಲ್ಲಿ ಕಾಣಿಸುವ ಮಹಿಳಾ ಸಂವೇದನೆ ಕುರಿತು ಚರ್ಚಿಸಿದ್ದಾರೆ.

ನಾಗಪ್ಪ ಗೌಡ ಆರ್. ರವರ "ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪಲ್ಲಟದ ಸ್ವರೂಪಗಳು" (೨೦೧೮) ಎಂಬ ಸಂಶೋಧನಾ ಕೃತಿಯಲ್ಲಿ ಬೊಳುವಾರು ಮಹಮ್ಮದ್ ಕುಂಞ ಹಾಗೂ ಸಾರಾ ಅಬೂಬಕ್ಕರ್ ರವರ ಕೃತಿಗಳಲ್ಲಿ ಧರ್ಮ ಹಾಗೂ ಕುಟುಂಬದ ಪರಿಕಲ್ಪನೆಯ ನೆಲೆಯಲ್ಲಿ 'ಜೆಹಾದ್' ಹಾಗೂ 'ಸಹನಾ' ಕಾದಂಬರಿಯನ್ನು ವಿಶ್ಲೇಷಿಸಿರುತ್ತಾರೆ. ಇದನ್ನು ಅಧ್ಯಯನದಲ್ಲಿ ಗ್ರಹಿಸಲಾಗಿದೆ.

ಮಲ್ಲಿಕಾ ಘಂಟಿ ಅವರ 'ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ' (ಪಿಹೆಚ್. ಡಿ ಮಹಾಪ್ರಬಂಧ, ೧೯೯೪) ಮಹಾಪ್ರಬಂಧದಲ್ಲಿ ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ-ಬಂಡಾಯಗಳಲ್ಲಿ ಮಹಿಳಾ ಕಥಾ ಸಾಹಿತ್ಯದ ಆಶಯಗಳನ್ನು ಗುರುತಿಸಿದ್ದಾರೆ.

ಶಿವಾನಂದ ಈ. ಕಳಕಣ್ಣ ರವರ 'ಕನ್ನಡದಲ್ಲಿ ಮುಸ್ಲಿಂ ಲೇಖಕರ ಕಥಾ ಸಾಹಿತ್ಯ ಒಂದು ಅಧ್ಯಯನ' (ಕನ್ನಡದಲ್ಲಿ ಪಿಹೆಚ್. ಡಿ ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ

ಮಹಾಪ್ರಬಂಧ, ೨೦೦೩) ಮಹಾ ಪ್ರಬಂಧದಲ್ಲಿ ಕನ್ನಡದಲ್ಲಿ ಮುಸ್ಲಿಂ ಕಥೆಗಾರರ ಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸಿ, ಸಂಶೋಧಿಸಲಾಗಿದೆ. ಮುಸ್ಲಿಂ ಪರಂಪರೆಯ ಆವರಣದಲ್ಲಿ ಮಹಿಳೆಯರ ಬದುಕಿನ ದೈನ್ಯತೆಯನ್ನು, ಅದಕ್ಕೆ ಕಾರಣವಾಗಿರುವ ಪುರುಷ ಕೇಂದ್ರಿತ, ಧರ್ಮ ಮೂಲಗಳ ಚರ್ಚೆಯನ್ನು ನಿರೂಪಿಸಲಾಗಿದೆ.

ಶ್ರೀಮತಿ ಕಸ್ತೂರಿ ಬ. ದಳವಾಯಿ ರವರ 'ಕಥೆ ಕಾದಂಬರಿಗಳಲ್ಲಿ ಮುಸ್ಲಿಂ ಮಹಿಳಾ ಸಂವೇದನೆ' (ಕನ್ನಡದಲ್ಲಿ ಪಿಹೆಚ್. ಡಿ. ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠಕ್ಕೆ ಸಾದಾರಪಡಿಸಿದ ಸಂಶೋಧನ ಮಹಾ ಪ್ರಬಂಧ, ೨೦೦೫) ಮಹಾಪ್ರಬಂಧದಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯದ ಸಂವೇದನೆಗಳಾದ ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಮಹಿಳಾ ಸಂವೇದನೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸವಿತಾ ಗುರಪ್ಪ ಕೊಟಬಾಗಿ ಅವರ 'ಶ್ರೀಮತಿ ಸಾರಾ ಅಬೂಬಕ್ಕರ್ ಅವರ ಕಥಾ ಸಾಹಿತ್ಯ' (ಕನ್ನಡ ವಿಷಯದಲ್ಲಿ ಪಿಹೆಚ್. ಡಿ. ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾಗರಪಡಿಸಿದ ಸಂಶೋಧನ ಮಹಾಪ್ರಬಂಧ, ೨೦೦೬) ಮಹಾಪ್ರಬಂಧದಲ್ಲಿ ಸಾರಾ ಅಬೂಬಕ್ಕರ್ ರವರ ಸಾಮಾಜಿಕ ಕಾಳಜಿಯ ವಿಭಿನ್ನ ನೆಲೆಗಳನ್ನು ಶೋಧಿಸಲಾಗಿದೆ.

ಸುಜಾತಾ ಮಹಾದೇವಪ್ಪ ರವರ 'ಕನ್ನಡ ಮುಸ್ಲಿಂ ಲೇಖಕರ ಸಣ್ಣ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ನೆಲೆಗಳು' (ಪಿಹೆಚ್. ಡಿ. ಪದವಿಗಾಗಿ ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ, ೨೦೧೯) ಮಹಾಪ್ರಬಂಧದಲ್ಲಿ ಮುಸ್ಲಿಂ ಸಂಸ್ಕೃತಿಯ ವಿವಿಧ ರಂಗಗಳ ಸಮಗ್ರ ಮಾಹಿತಿಯನ್ನು, ಆ ಸಂಸ್ಕೃತಿಯ ಇತಿಮಿತಿಗಳನ್ನು ಹಾಗೂ ಅದರ ವೈವಿಧ್ಯತೆಯನ್ನು ಸಮುದಾಯದ ಲೇಖಕರು ತಮ್ಮ ಸಾಹಿತ್ಯದಲ್ಲಿ ಹೇಗೆ ವ್ಯಕ್ತಪಡಿಸಿದ್ದಾರೆ ಎಂಬುದನ್ನು ಇಲ್ಲಿ ಸಂಶೋಧನೆಗೆ ಒಳಪಡಿಸಲಾಗಿದೆ.

ಶ್ರೀಮತಿ ಎಚ್. ಎಸ್. ರವರ 'ಕನ್ನಡ ಮಹಿಳಾ ಸಾಹಿತ್ಯ ಸಂಶೋಧನೆಯ ದಲಿತ ಬಂಡಾಯ ಕಥೆಗಳಲ್ಲಿ ಕೌಟುಂಬಿಕ ಸಮಸ್ಯೆಗಳು' ಅಧ್ಯಾಯದಲ್ಲಿ ದಲಿತ ಬಂಡಾಯ ಸಾಹಿತ್ಯಕ್ಕೆ ಸಂಬಂಧಪಟ್ಟ ಪ್ರಮುಖ ಲೇಖಕಿಯರ ಕಥೆಗಳಲ್ಲಿ ಕೌಟುಂಬಿಕ ಸಮಸ್ಯೆಗಳನ್ನು ಹಾಗೂ ಆ ಕೇಂದ್ರದಿಂದ ವ್ಯಾಪಿಸಿಕೊಳ್ಳುವ ಸಮಸ್ಯೆಯ ಇತರ ನೆಲೆಗಳನ್ನು ಚರ್ಚಿಸಲಾಗಿದೆ. ಇಲ್ಲಿ ದಲಿತ ಸಂವೇದನೆ, ಮುಸ್ಲಿಂ ಸಂವೇದನೆಗಳನ್ನು ಹೆಚ್ಚು ಗಮನಿಸಲಾಗಿದೆ.

ಶ್ರೀಮತಿ ಎಚ್. ಎಸ್. ಚಿಕ್ಕನಗೌಡ ಅವರ 'ಮಹಿಳಾ ಸಣ್ಣ ಕಥೆಗಳಲ್ಲಿ ಕೌಟುಂಬಿಕ ಸಮಸ್ಯೆಗಳು' (ಪಿಹೆಚ್. ಡಿ. ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾನಿಲಯ, ೨೦೧೩) ಮಹಾಪ್ರಬಂಧವು ನವೋದಯ, ನವ್ಯ, ಬಂಡಾಯ, ಕಾಲಘಟ್ಟದ ಕಾದಂಬರಿಗಳು ಚಿತ್ರಿಸಿದ ಕೌಟುಂಬಿಕ ಸಮಸ್ಯೆಗಳ ಕುರಿತು ಸಂಶೋಧಿಸಿದ್ದಾರೆ.

ಸುಲತಾ ವಿದ್ಯಾಧರ್ ರವರ 'ಶ್ರೀಮುಡಿ' (ಕರಾವಳಿ ಲೇಖಕಿಯರ ಮಾಹಿತಿ ಕಣಜ) ಕೃತಿಯಲ್ಲಿ ಕರಾವಳಿ ಭಾಗದ ಮಹಿಳೆಯರ ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ದಾಖಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಸಾರಾ ಅಬೂಬಕ್ಕರ್ ರವರ 'ಲೇಖನ ಗುಚ್ಛ' ಲೇಖನ ಸಂಗ್ರಹದಲ್ಲಿ ಮುಸ್ಲಿಂ ಮಹಿಳೆಯರು ಸಾಹಿತ್ಯಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಶೋಷಣೆಗೆ ಒಳಗಾದ ರೀತಿಯನ್ನು ವಿವರಿಸಲಾಗಿದೆ. ಮುಸ್ಲಿಂ ಸಮಾಜದಲ್ಲಿ ಮಹಿಳೆಯರನ್ನು ಕೀಳಾಗಿ ಕಾಣುವ ಹಾಗೂ ಅವರ ಮೇಲೆ ದೌರ್ಜನ್ಯ ನಡೆಸುವ ರೀತಿಯನ್ನು ಲೇಖಕಿಯು ತಮ್ಮ ಪ್ರತಿಯೊಂದು ಕಥೆ ಕಾದಂಬರಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ಕಥೆ-ಕಾದಂಬರಿಗಳ ಕುರಿತ ವಿಶ್ಲೇಷಣೆಯನ್ನು 'ಲೇಖನ ಗುಚ್ಛ' ಲೇಖನ ಸಂಗ್ರಹದಲ್ಲಿ ವಿವರಿಸಲಾಗಿದೆ.

ರೋಹಿಣಿ ಬಿ. ಎಂ. ರವರ 'ಸ್ತ್ರೀ ಭಿನ್ನ ಮುಖಗಳು' ಕೃತಿಯ 'ಸಾರಾ ಅವರ ಸೃಜನೇತರ ಕೃತಿಗಳು' ಲೇಖನದಲ್ಲಿ ಸಾರಾ ಅಬೂಬಕ್ಕರ್ ರವರ ಲೇಖನಗಳ ಬಗ್ಗೆ ಚರ್ಚಿಸಲಾಗಿದೆ. ಅದರಲ್ಲಿನ ಎಷ್ಟೋ ಲೇಖನಗಳು ಕೇವಲ ಮುಸ್ಲಿಂ ಸಮುದಾಯಕ್ಕೆ ಸೀಮಿತವಾದವುಗಳಲ್ಲ. ಇಡೀ ಸ್ತ್ರೀ ಸಮುದಾಯದ ಅಂತರಾಳದ ಧ್ವನಿಯಾಗಿದೆ.

ಸುಮಿತ್ರಾ ಬಾಯಿ ಬಿ. ಎನ್. ರವರ 'ಸ್ತ್ರೀವಾದಿ ಪ್ರವೇಶಿಕೆ' ಕೃತಿಯಲ್ಲಿ ಮಹಿಳೆಯು ತನ್ನ ಅನಿಸಿಕೆಗಳನ್ನು ಯಾವ ರೀತಿ ಸಾಹಿತ್ಯದ ಮೂಲಕ ಅಭಿವ್ಯಕ್ತಿಸಲು ಪ್ರಯತ್ನಿಸುತ್ತಾಳೆ ಎಂಬುದನ್ನು ಹೇಳಲಾಗಿದೆ. ಮಹಿಳೆಯು ಅತ್ಯಲ್ಪ ಆಕಾಂಕ್ಷೆಯ ಜೊತೆ ತನ್ನ ನೆನಪುಗಳನ್ನು ಬರೆಯ ತೊಡಗುತ್ತಾಳೆ. ಆತ್ಮಕಥೆಯನ್ನು ಕಾದಂಬರಿಯಾಗಿಸುತ್ತಾಳೆ.

ಡಾ. ವಸುಂದರಾ ಭೂಪತಿ ಅವರ 'ಮಹಿಳೆ ಕುರಿತ ಸಾಮಾಜಿಕ ದೃಷ್ಟಿಕೋನ ಬದಲಾಗುವುದು ಹೇಗೆ?' ಎಂಬ ಲೇಖನದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಮುಸ್ಲಿಂ ಸಂವೇದನೆ, ಮಹಿಳಾ ಸಂವೇದನೆಗಳು ಹಾಗೂ ಮಹಿಳಾ ಸಾಹಿತ್ಯದ ಕುರಿತು ವಿವರಿಸಲಾಗಿದೆ.

ಡಾ. ಮಂಗಳ ಪ್ರಿಯದರ್ಶಿನಿ ಡಿ. ಅವರು 'ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ' ಎನ್ನುವ ಕೃತಿಯಲ್ಲಿ ಸಾಮಾಜಿಕ ಸನ್ನಿವೇಶದಲ್ಲಿ, ಲಿಂಗಾಧಾರಿತ ಸಮಾಜದಲ್ಲಿ ಮಹಿಳೆಯ ಸ್ಥಾನಮಾನ, ಅವಕಾಶಗಳು, ಒತ್ತಡಗಳು ಮತ್ತು ಸಾಧ್ಯತೆಗಳನ್ನು ವಿವೇಚಿಸಿದ್ದಾರೆ.

ಬದುಕು ಕಮ್ಯುನಿಟಿ ಕಾಲೇಜಿನ ಮಂಜುಳ ಹುಲಿಕುಂಟೆ ಯವರ 'ಕಡಲ ಊರಿನ ಕಣ್ಣೀರ ಕಥೆಗಳು' (ಜನನುಡಿ) ಲೇಖನದಲ್ಲಿ ಕರಾವಳಿ ಮಹಿಳಾ ಲೋಕದ ಕುರಿತಾಗಿ ಸಂಶೋಧನೆ ಮಾಡಿದಾಗ ಒಂದೊಂದು ಹೆಣ್ಣಿನ ಒಡಲಾಳದಲ್ಲಿ ನೋವಿನ ಕಿಚ್ಚು ಬೆಸೆದ ಆಕ್ರೋಶದ ಧ್ವನಿ, ಗುಡುಗು-ಮಿಂಚುಗಳಂತೆ ಇರುತ್ತದೆ ಎಂಬುದು ಅರ್ಥವಾಗಿದ್ದು ಮಂಗಳೂರಿನಲ್ಲೇ ಇದ್ದು ಎಂದು ಆಕೆ ಹೇಳುತ್ತಾರೆ. ಈ ಸಂದರ್ಭದಲ್ಲಿ ಲೇಖಕಿ ಸಾರಾ ಅಬೂಬಕ್ಕರ್ ಕರಾವಳಿ ಪ್ರದೇಶದಲ್ಲಿ ಕೋಮುವಾದ ಇತ್ತೀಚೆಗೆ ಬಂದಿರುವುದಾಗಿಯೂ, ಇಂದಿಗೂ ಹಿಂದೂ ಮುಸ್ಲಿಮರು ಜೊತೆಯಾಗಿ ಬಾಳುತ್ತಾರೆಂದು ಹೇಳುತ್ತಾರೆ. ಲೇಖಕಿಯು ಕರಾವಳಿಯಲ್ಲಿ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎನ್ನುತ್ತಾರೆ.

ಹೇಮಾ ಹೆಬ್ಬಗೋಡಿ ಯವರ 'ಚಂದ್ರಗಿರಿಯ ತೀರದ ಹೋರಾಟದ ಹಕ್ಕಿ' (ಸಂಪದ ಜೂನ್ ೩೦, ೨೦೧೩) ಲೇಖನದಲ್ಲಿ ಸಾರಾ ಅಬೂಬಕ್ಕರ್ ರವರ ಲಿಂಗಾಧಾರಿತ ಅಸಮಾನತೆಯ ಹೋರಾಟದ ಕುರಿತು ಚರ್ಚಿಸಲಾಗಿದೆ. ಇವರ ವೈಯಕ್ತಿಕ ಬದುಕಿನ ಕಥೆ, ಸಮಾನತೆಗಾಗಿ ಹೋರಾಡುವ ಹುಡುಕಾಟದ ಕಥೆ ಇದಾಗಿದೆ.

ಈಗಾಗಲೇ ಸಾರಾ ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ ಇವರ ಸಾಹಿತ್ಯದ ಬಗ್ಗೆ ಅನೇಕ ಅಧ್ಯಯನಗಳು ನಡೆದಿವೆ. ಶಹನಾಝ್ ಎಂ. ಅವರ ಕಥನ ಸಾಹಿತ್ಯದ ಕುರಿತೂ ಸಹ ಬಿಡಿ ಬಿಡಿಯಾಗಿ ಅಧ್ಯಯನಗಳು ನಡೆದಿವೆ. ಆದರೆ ಈ ಮಹಾಪ್ರಬಂಧದಲ್ಲಿ ಈ ಸಾಹಿತಿಗಳಲ್ಲದೆ ಏ.ಕೆ.ಕುಕ್ಕಿಲ, ಹಂಝ ಮಲಾರ್, ಅವರ ಕಥನ ಸಾಹಿತ್ಯವನ್ನೂ ಸಹ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯ ಎನ್ನುವ ವ್ಯಾಪ್ತಿಯಲ್ಲಿರುವ ಪ್ರಸ್ತುತ ಅಧ್ಯಯನಕ್ಕೆ ಸಾರಾ ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ, ಶಹನಾಝ್ ಎಂ, ಹಂಝ ಮಲಾರ್, ಏ.ಕೆ. ಕುಕ್ಕಿಲ ಅವರು ರಚಿಸಿರುವ ಕಥೆ ಮತ್ತು ಕಾದಂಬರಿಗಳನ್ನು ಪ್ರಮುಖ ಆಕರಗಳಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಕಥನ ಪ್ರಧಾನವಾಗಿರುವ ಕಥೆ ಮತ್ತು ಕಾದಂಬರಿ

ಸಾಹಿತ್ಯವನ್ನು ಕಥನ ಸಾಹಿತ್ಯ ಎನ್ನುವ ಶೀರ್ಷಿಕೆ ವ್ಯಾಪ್ತಿಯಲ್ಲಿ ಸಮಾವೇಶಗೊಳಿಸಿ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಪ್ರಸ್ತುತತೆ:

ಇದುವರೆಗೆ ಮುಸ್ಲಿಂ ಕಥನ ಸಾಹಿತ್ಯದ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೆ ಸಾರಾ ಅಬೂಬಕ್ಕರ್ ಇವರ ಕೃತಿಗಳ ಕುರಿತಂತೆಯೇ ಹೆಚ್ಚಿನ ಅಧ್ಯಯನಗಳು ನಡೆದಿವೆ. ಆಧುನಿಕ ಲೇಖಕರಾದ ಶಹನಾಝ್ ಎಂ, ಹಂಝ ಮಲಾರ್, ಏ.ಕೆ ಕುಕ್ಕಿಲ ಇವರ ಕಥನ ಸಾಹಿತ್ಯದ ಕುರಿತು ಅಧ್ಯಯನಗಳು ಕಂಡು ಬರುವುದಿಲ್ಲ. ಸಾರಾ ಅಬೂಬಕ್ಕರ್ ಅವರ ಕಥನ ಸಾಹಿತ್ಯದಲ್ಲಿ ಮಹಿಳಾ ದೌರ್ಜನ್ಯಕ್ಕೆ ಧರ್ಮದ ದುರುಪಯೋಗ ಕಾರಣ ಎಂಬಂತೆ ಚಿತ್ರಿತವಾಗಿದೆ. ಆದರೆ ಆಧುನಿಕ ಮುಸ್ಲಿಂ ಕಥನ ಸಾಹಿತಿಗಳು ಸಮಾಜದಲ್ಲಿ ನಡೆಯುವ ಮಹಿಳಾ ದೌರ್ಜನ್ಯಕ್ಕಾಗಲೀ, ಸಾಮಾಜಿಕ ಪಿಡುಗುಗಳಿಗಾಗಲೀ ಧರ್ಮ ಕಾರಣವಲ್ಲ, ಸಮಾಜದ ಜನರೇ ಕಾರಣ ಎಂದು ಚಿತ್ರಿಸಿದ್ದಾರೆ. ಆಧುನಿಕ ಮುಸ್ಲಿಂ ಕಥನ ಸಾಹಿತಿಗಳ ಸಾಹಿತ್ಯಿಕ ಅಧ್ಯಯನವು ಸಮಗ್ರವಾಗಿ ನಡೆದಿಲ್ಲ. ಆದುದರಿಂದ ಈ ಅಧ್ಯಯನವು ಹೆಚ್ಚು ಅವಶ್ಯಕವಾಗಿದೆ. ಕಳೆದ ೫೦-೬೦ ವರ್ಷಗಳ ಅವಧಿಯಲ್ಲಿ ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯವನ್ನು ಆಧರಿಸಿ ಅಧ್ಯಯನದ ಅಗತ್ಯತೆಯನ್ನು ಪರಿಗಣಿಸಿ, ಈ ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಸಮಾರೋಪ

'ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ' ಎಂಬ ಈ ಮಹಾಪ್ರಬಂಧದಲ್ಲಿ ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಮಹಿಳೆಯು ಕುಟುಂಬ ಹಾಗೂ ಸಮಾಜದಲ್ಲಿ ಹೇಗೆ ಪ್ರತಿನಿಧೀಕರಣಗೊಂಡಿದ್ದಾಳೆ, ಅವಳ ಸಮಸ್ಯೆಗಳನ್ನು ಸಮಾಜದಲ್ಲಿ ಅವಳು ಯಾವ ರೀತಿ ಎದುರಿಸುತ್ತಾಳೆ ಎಂಬುದನ್ನು ಸಾಹಿತ್ಯದಲ್ಲಿ ಮಹಿಳೆಯ ಪ್ರತಿನಿಧೀಕರಣ ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧನಾ ಅಧ್ಯಯನ ನಡೆಸಲಾಗಿದೆ. ಈ ಮಹಾಪ್ರಬಂಧದಲ್ಲಿ ಮುಖ್ಯವಾಗಿ ಸಾರಾ ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ, ಶಹನಾಝ್

ಎಂ. ಹಂಝ ಮಲಾರ್, ಎ.ಕೆ.ಕುಕ್ಕಿಲ ಇವರ ಕಥನ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದು ಈ ಅಧ್ಯಯನದ ಒಟ್ಟು ವ್ಯಾಪ್ತಿಯನ್ನು ಸೂಚಿಸುತ್ತದೆ.

ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಲೇಖಕರು ಹೆಣ್ಣುಮಕ್ಕಳ ಅಂತರಂಗದ ತುಮುಲಗಳನ್ನು, ಸಮಸ್ಯೆಗಳನ್ನು ಸಾಹಿತ್ಯದ ಮೂಲಕ ಪ್ರಚುರಪಡಿಸಿದ್ದಾರೆ. ಪ್ರತಿಯೊಬ್ಬ ಲೇಖಕರು ತನ್ನ ಕಾಲ, ಸನ್ನಿವೇಶಕ್ಕೆ ಅನುಗುಣವಾಗಿ ತನ್ನ ಸುತ್ತಮುತ್ತಲಿನ ಪರಿಸರದಿಂದ ಪ್ರಭಾವಿತರಾಗಿರುವುದನ್ನು ಸಾಹಿತ್ಯದ ಮೂಲಕ ಗ್ರಹಿಸಲಾಗಿದೆ. 'ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿನಿಧೀಕರಣ' ಎಂಬ ಈ ಮಹಾಪ್ರಬಂಧವು ಕರಾವಳಿಯ ಮುಸ್ಲಿಂ ಲೇಖಕರು ತಮ್ಮ ಕೃತಿಗಳಲ್ಲಿ ಮಹಿಳೆಯರನ್ನು ಬೇರೆ ಬೇರೆ ನೆಲೆಗಳಲ್ಲಿ ಯಾವ ರೀತಿ ಚಿತ್ರಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಮಹಾಪ್ರಬಂಧವು 'ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯ' ಎಂಬ ಶೀರ್ಷಿಕೆ ಹೊಂದಿದ್ದರೂ ಇಲ್ಲಿ ಕೇವಲ ಆರು ಲೇಖಕರ ಕಥನ ಸಾಹಿತ್ಯವನ್ನು ಆರಿಸಲಾಗಿದೆ. ಇದು ಈ ಅಧ್ಯಯನದ ಒಟ್ಟು ವ್ಯಾಪ್ತಿ ಮತ್ತು ಮಿತಿಯನ್ನು ಸೂಚಿಸುತ್ತದೆ.

ಕನ್ನಡದಲ್ಲಿ ಮುಸ್ಲಿಂ ಕಥನ ಸಾಹಿತ್ಯ ಅಥವಾ ಮಹಿಳಾ ಸಂವೇದನೆ ಎನ್ನುವುದು ಎಪ್ಪತ್ತರ ದಶಕದಲ್ಲಿಯೇ ಆರಂಭವಾಯಿತು. ಆ ಕಾಲದ ಹಲವಾರು ಲೇಖಕರು ಸಮಾಜದ ಅನಿಷ್ಟಗಳ ವಿರುದ್ಧ ಬಂಡೆದ್ದು, ಮಹಿಳೆಯರಿಗೆ ನ್ಯಾಯ ಒದಗಿಸುವ ಪ್ರಯತ್ನವನ್ನು ಮಾಡಿದರು. ಮುಸ್ಲಿಂ ಸಂವೇದನೆಯನ್ನು ತಮ್ಮ ಕಥನ ಸಾಹಿತ್ಯದಲ್ಲಿ ಪ್ರಸ್ತಾಪ ಮಾಡಿದವರಲ್ಲಿ ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್, ಫಕೀರ್ ಮಹಮ್ಮದ್ ಕಟ್ಪಾಡಿ, ಬೊಳುವಾರು ಮಹಮ್ಮದ್ ಕುಂಞಿ, ಎ.ಕೆ. ಕುಕ್ಕಿಲ, ಶಹನಾಝ್ ಎಂ., ಹಂಝ ಮಲಾರ್ ಮೊದಲಾದವರು ಪ್ರಮುಖರು. ಪ್ರಸ್ತುತ ಮಹಾಪ್ರಬಂಧದಲ್ಲಿ ಸಾರಾ ಅಬೂಬಕ್ಕರ್, ಫಕೀರ್ ಮಹಮ್ಮದ್ ಕಟ್ಪಾಡಿ, ಬೊಳುವಾರು ಮಹಮ್ಮದ್ ಕುಂಞಿ, ಶಹನಾಝ್ ಎಂ., ಎ.ಕೆ. ಕುಕ್ಕಿಲ, ಹಂಝ ಮಲಾರ್ ಇವರ ಕಥನ ಸಾಹಿತ್ಯವನ್ನು ಆರಿಸಿಕೊಳ್ಳಲಾಗಿದೆ. ಈ ಎಲ್ಲಾ ಲೇಖಕರು ತಮ್ಮ ಸುತ್ತಲಿನ ಪರಿಸರದಿಂದ ಪ್ರಭಾವಿತರಾಗಿ, ಅಲ್ಲಿನ ಮಹಿಳೆಯರ ಕಷ್ಟದ ಬದುಕು, ನೋವು ನಲಿವುಗಳು, ಜೀವನ ಕ್ರಮ, ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ ಇವೆಲ್ಲದರ ಕುರಿತು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ.

ಸಾರಾ ಅಬೂಬಕ್ಕರ್ ಅವರ ಕಾದಂಬರಿಗಳನ್ನು ಅವಲೋಕಿಸಿದಾಗ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಅವರ ಕಾದಂಬರಿಗಳಲ್ಲಿ ಹೆಣ್ಣು ಸಮಾಜದ ವಿರುದ್ಧ, ಸಾಮಾಜಿಕ

ವ್ಯವಸ್ಥೆಯ ವಿರುದ್ಧ ಬಂಡೇಳುವುದನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಸಾರಾ ಅವರು ಹುಟ್ಟಿ ಬೆಳೆದ ಪರಿಸರ ಹಾಗೂ ಸಾಹಿತ್ಯ ರಚನೆಯ ಕಾಲಘಟ್ಟ. ಸಾರಾ ಅಬೂಬಕ್ಕರ್ ಅವರು ದಲಿತ-ಬಂಡಾಯ ಕಾಲಘಟ್ಟದಲ್ಲಿ ತಮ್ಮ ಸಾಹಿತ್ಯ ರಚನೆಯನ್ನು ಮಾಡಿದರು. ಅವರ ಬರಹಗಳು ಅವರ ಸುತ್ತಮುತ್ತಲಿನ ಪರಿಸರದಿಂದ ಪ್ರೇರೇಪಿತವಾಗಿವೆ. ತಮ್ಮ ಸುತ್ತಲಿನ ಮುಸ್ಲಿಂ ಸಮುದಾಯದ ಮಹಿಳೆಯರ ನೋವು, ಕಷ್ಟಗಳನ್ನು ಕಂಡು ಅವರ ದುಃಖಗಳಿಗೆ ಸ್ಪಂದಿಸುತ್ತಾ ಸಾರಾ ಅವರು ತಮ್ಮ ಸಾಹಿತ್ಯದಲ್ಲಿ ಹೆಣ್ಣುಮಕ್ಕಳ ದುಃಖ, ತಲ್ಲಣಗಳನ್ನು ಚಿತ್ರಿಸಿದ್ದಾರೆ. ತಮ್ಮ ಸುತ್ತಮುತ್ತಲಿನ ಹೆಂಗಸರ ಬಗ್ಗೆ ಸಾರಾ ಅವರು ಸದಾ ಚಿಂತಿಸುತ್ತಿದ್ದರು. ಹೆಣ್ಣಿನ ಕಷ್ಟಕಾರ್ಪಣ್ಯಗಳು, ದುಃಖಕರ ಜೀವನ, ಮಹಿಳೆ ಕುಟುಂಬದಲ್ಲಿ ಅನುಭವಿಸುವ ನೋವು ಇವೆಲ್ಲದರ ಬಗ್ಗೆ ಬರೆಯಬೇಕೆಂಬ ಅತಿಯಾದ ಹಂಬಲವನ್ನು ಸಾರಾ ಅವರು ಹೊಂದಿದ್ದರು.

ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುವ ಬೊಳುವಾರು ಮಹಮ್ಮದ್ ಕುಂಞ ತಮ್ಮ ಜನಾಂಗದ ನೋವು-ನಲಿವುಗಳನ್ನು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ. ಮುಸ್ಲಿಂ ಮಹಿಳೆಯರು ಸಮಾಜದಲ್ಲಿ ಅನುಭವಿಸುವ ನೋವು, ಅದರಲ್ಲೂ ಬಡ ಮುಸ್ಲಿಂ ಹೆಣ್ಣುಮಕ್ಕಳ ಹೃದಯ ವಿದ್ರಾವಕ ಬಾಳಿನ ಚಿತ್ರಣವನ್ನು ಬೊಳುವಾರು ಮಹಮ್ಮದ್ ಕುಂಞ ಅವರ ಕಥನ ಸಾಹಿತ್ಯದಲ್ಲಿ ಕಾಣಬಹುದು. ಸಮಾಜದಲ್ಲಿ ಮುಸ್ಲಿಂ ಹೆಣ್ಣುಮಕ್ಕಳು ಶೋಷಿತರಾಗುವ ರೀತಿಯನ್ನು ಯಥಾವತ್ತಾಗಿ ಬೊಳುವಾರು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. ಮುಸ್ಲಿಂ ಸಮಾಜದ ಮೇಲ್ವರ್ಗದವರು ಧರ್ಮದ ಹೆಸರಿನಲ್ಲಿ ಬಡವರನ್ನು ಶೋಷಣೆಗೆ ಒಳಪಡಿಸುವುದನ್ನು ಹಾಗೂ ಸಮಾಜದಲ್ಲಿ ಮಹಿಳೆಗೆ ಆಗುವ ಅನ್ಯಾಯ, ಅನಾಚಾರಗಳ ವಿರುದ್ಧ ಬೊಳುವಾರು ತಮ್ಮ ಸಾಹಿತ್ಯದ ಮೂಲಕ ವಿರೋಧಿಸುವುದನ್ನು ಗ್ರಹಿಸಬಹುದು.

ಫಕೀರ್ ಮಹಮ್ಮದ್ ಕಟ್ಪಾಡಿಯವರು ತಮ್ಮ ಸಾಹಿತ್ಯದಲ್ಲಿ ವಿಶೇಷವಾಗಿ ದಕ್ಷಿಣ ಕನ್ನಡದ ಮುಸ್ಲಿಂ ಸಮುದಾಯದ ಸಂಪ್ರದಾಯಗಳನ್ನು ಹಾಗೂ ನೋವು-ನಲಿವುಗಳನ್ನು ನೈಜವಾಗಿ ವ್ಯಕ್ತಪಡಿಸಿದ್ದಾರೆ. ಕನ್ನಡ ಕಥಾಲೋಕಕ್ಕೆ ಬ್ಯಾರಿ ಮುಸ್ಲಿಂ ಸಮುದಾಯದ ನೋವು-ನಲಿವುಗಳನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ಕಟ್ಟಿ ಕೊಟ್ಟವರಲ್ಲಿ ಕಟ್ಪಾಡಿ ಮೊದಲಿಗರು. ಇಲ್ಲಿನ ತಳಸ್ತರ ಬದುಕಿನ ಜೊತೆಗೆ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡವರು ಇವರು.

ಶಹನಾಝ್ ಎಂ. ಅವರ ಕಥೆಗಳಲ್ಲಿ, ಕಾದಂಬರಿಗಳಲ್ಲಿ ಗಮನಿಸಬಹುದಾದ ಅಂಶವೆಂದರೆ ಆಕೆ ಮುಸ್ಲಿಂ ಧರ್ಮದ ಕಟ್ಟುಪಾಡುಗಳನ್ನು ಮೀರದೆ ಧರ್ಮದ ಚೌಕಟ್ಟಿನಲ್ಲಿ ಇದ್ದುಕೊಂಡೇ ಮುಸ್ಲಿಂ ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಹೆಣ್ಣಿನ ಜವಾಬ್ದಾರಿಗಳನ್ನು, ಸ್ಥಾನಮಾನಗಳನ್ನು ಅವರು ಕಥೆಗಳ ಮೂಲಕ ತಿಳಿಯಪಡಿಸುತ್ತಾರೆ. ಆಕೆ ಎಲ್ಲಿಯೂ ಯಥಾವತ್ತಾಗಿ ತಮ್ಮ ಕಥೆಗಳಲ್ಲಿ ಬಹಿರಂಗವಾಗಿ ಕಟ್ಟುಪಾಡುಗಳನ್ನು ನಿರ್ಬಂಧಿಸುವುದಿಲ್ಲ. ಮುಸ್ಲಿಂ ಸಮಾಜದಲ್ಲಿ, ಕುಟುಂಬದಲ್ಲಿ ಗಂಡು-ಹೆಣ್ಣು ಹೊಂದಿಕೊಂಡು ಒಬ್ಬರಿಗೊಬ್ಬರು ಆಸರೆಯಾಗಿ ಬಾಳಬೇಕೆಂಬ ನಿಲುವನ್ನು ಶಹನಾಝ್ ಎಂ. ತಳೆದಿದ್ದಾರೆ. "ಪುರುಷರೆಲ್ಲರೂ ಕೆಟ್ಟವರಲ್ಲ, ಸ್ತ್ರೀಯರೆಲ್ಲರೂ ಒಳ್ಳೆಯವರಲ್ಲ, ಒಬ್ಬಳು ಮಹಿಳೆ ದೌರ್ಜನ್ಯಕ್ಕೆ ಒಳಗಾಗಬೇಕಾದರೆ ಅದರಲ್ಲಿ ಪುರುಷನಷ್ಟೇ ಹೆಣ್ಣಿನ ಪಾತ್ರವೂ ಇದೆ" ಎಂಬುದು ಶಹನಾಝ್ ಎಂ. ಇವರ ನಿಲುವು.

ಹಂಝು ಮಲಾರ್ ಅವರ ಕಥೆಗಳಲ್ಲಿ ಹೆಣ್ಣು ಧಾರ್ಮಿಕ ಚೌಕಟ್ಟಿನಲ್ಲಿ ಇದ್ದುಕೊಂಡೇ ತನ್ನ ಭಾವನೆಗಳನ್ನು ವ್ಯಕ್ತಪಡಿಸುವಂತಿದೆ. ಹಂಝು ಮಲಾರ್ ಅವರು ಧಾರ್ಮಿಕ ಚೌಕಟ್ಟಿನೊಳಗೆ ಇದ್ದು ಮಹಿಳೆ ಕುಟುಂಬದಲ್ಲಿ, ಸಮಾಜದಲ್ಲಿ ಅನುಭವಿಸುವ ನೋವು, ದೌರ್ಜನ್ಯಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಇವರ ಕಥನಗಳಲ್ಲಿ ಬಡ ಕುಟುಂಬದ ಹೆಣ್ಣು ಮಕ್ಕಳು ಸಮಾಜದಲ್ಲಿ ಮೇಲ್ವರ್ಗದವರ ಶೋಷಣೆಗೆ ಒಳಗಾಗುವುದನ್ನು ಕಾಣಬಹುದು.

ಏ.ಕೆ. ಕುಕ್ಕಿಲರು ಸಮಾಜದ ಅನಿಷ್ಟಗಳನ್ನು ತಮ್ಮ ಕಥೆಗಳಲ್ಲಿ ಧ್ವನಿಸಿದ್ದಾರೆ. ಅವರ ಕಥೆಯಲ್ಲಿ ನೋವನ್ನು ಅನುಭವಿಸುವ ಪಾತ್ರಗಳೆಲ್ಲವೂ ಬಡಕುಟುಂಬದಿಂದ ಬಂದ ಅಸಹಾಯಕರಾಗಿದ್ದಾರೆ. ಪ್ರತಿಯೊಂದು ಪಾತ್ರಗಳೂ ಬಡತನದ ಸಾವಿರ ಬಗೆಯನ್ನು ಸಾರುತ್ತವೆ. ಕುಕ್ಕಿಲರು ಪ್ರಸ್ತುತ ಸಮಾಜದ ಮುಸ್ಲಿಂ ಮಹಿಳೆಯರ ನೋವನ್ನೂ ಚಿತ್ರಿಸಿದ್ದಾರೆ. ಇವರ ಕಥೆಗಳಲ್ಲಿ ನೋವನ್ನು ಅನುಭವಿಸುವ ಸ್ತ್ರೀ ಪಾತ್ರಗಳೆಲ್ಲವೂ ಕೆಳವರ್ಗದ ಬಡಕುಟುಂಬದಲ್ಲಿ ಹುಟ್ಟಿದವರಾಗಿದ್ದಾರೆ. ಇವರು ಮುಸ್ಲಿಂ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುತ್ತಾ ಭಾವಾವೇಶದಲ್ಲಿ ಯಾವುದೇ ಭಾವನೆಗಳನ್ನು ವ್ಯಕ್ತಪಡಿಸದೆ ಎಲ್ಲವನ್ನೂ ಶಾಂತವಾಗಿ ನಿರ್ಲಿಪ್ತತೆಯಿಂದ ತಮ್ಮ ಕಥೆಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧದಲ್ಲಿ ಮಹಿಳೆಯರು ಶೋಷಣೆಗೊಳ್ಳುತ್ತಿರುವ ವಿವಿಧ ಆಯಾಮಗಳನ್ನು ಚರ್ಚಿಸಲಾಗಿದೆ. ಕುಟುಂಬ ಹಾಗೂ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನ, ಕೌಟುಂಬಿಕವಾಗಿ ಮಹಿಳೆಯರು ನಿಭಾಯಿಸುವ ಪಾತ್ರಗಳು, ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ ಇತ್ಯಾದಿಗಳ

ಕುರಿತು ಇಲ್ಲಿ ಚರ್ಚಿಸಲಾಗಿದೆ. ಕರಾವಳಿ ಮುಸ್ಲಿಂ ಕಥನ ಸಾಹಿತ್ಯದ ಮೂಲಕ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸಮಾಜದಲ್ಲಿ ತಮ್ಮ ಸ್ಥಾನಮಾನವನ್ನು ಪಡೆಯಲು ಅವರು ನಡೆಸುವ ಹೋರಾಟವನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ನಿಟ್ಟಿನಲ್ಲಿ ಈ ಅಧ್ಯಯನವು ಪ್ರತಿಯೊಂದು ಧರ್ಮವು ಸ್ತ್ರೀಯರಿಗೆ ನೀಡಿರುವ ಸ್ಥಾನಮಾನವನ್ನು ಅವರಿಗೆ ಮನವರಿಕೆ ಮಾಡುವ ಹಾಗೂ ಸಮಾಜದ ಕೆಲವು ವ್ಯಕ್ತಿಗಳು ನಡೆಸುವ ದೌರ್ಜನ್ಯದಿಂದ ಹೆಣ್ಣನ್ನು ಮುಕ್ತಿಗೊಳಿಸುವ ಜಾಗೃತಿಯನ್ನು ಮೂಡಿಸಬೇಕಾದ ಅಗತ್ಯತೆಯ ಕಡೆಗೆ ಗಮನಹರಿಸಿದೆ.

ಹಲವಾರು ಶತಮಾನಗಳಿಂದ ಹೆಣ್ಣು ದೌರ್ಜನ್ಯಕ್ಕೆ, ದಬ್ಬಾಳಿಕೆಗೆ ಒಳಪಡುತ್ತಾ ಬಂದಿದ್ದಾಳೆ. ಇಸ್ಲಾಂ ಧರ್ಮ ಹೆಣ್ಣಿಗೆ ಒಳ್ಳೆಯ ಸ್ಥಾನಮಾನ ನೀಡಿದರೂ, ಅದು ಆಕೆಗೆ ದೊರಕುತ್ತಿಲ್ಲ. ಮಹಿಳೆಯು ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಹಲವು ಸಮಸ್ಯೆಗಳಿಗೆ ಒಳಗಾಗುತ್ತಿದ್ದಾಳೆ. ಆಧುನಿಕ ಕಾಲದಲ್ಲಿ ಮಹಿಳೆ ತನ್ನ ಹಕ್ಕಿನ ಬಗ್ಗೆ ತಿಳಿದುಕೊಂಡರೂ ಸಹ ಸಂಪ್ರದಾಯವನ್ನು ಮೀರಿ ನಡೆಯುವ ಧೈರ್ಯ ಆಕೆಗಿಲ್ಲ. ಹೆಣ್ಣು ವಿದ್ಯಾವಂತಳಾಗಿ, ಒಳ್ಳೆಯ ವೃತ್ತಿಯನ್ನು ಪಡೆದುಕೊಂಡರೂ ಸಹ ಮೇಲ್ವರ್ಗದವರ ದಬ್ಬಾಳಿಕೆಗೆ ಒಳಗಾಗಬೇಕಾಗುತ್ತದೆ. ವರದಕ್ಷಿಣೆ, ಚಿನ್ನಾಭರಣ, ಸಂಪತ್ತು ಕೌಟುಂಬಿಕ ಕಲಹಕ್ಕೆ ಕಾರಣವಾಗಿ ತಲಾಖ್, ಬಹುಪತ್ನಿತ್ವಕ್ಕೂ ಕಾರಣವಾಗುತ್ತದೆ. ಧರ್ಮದ ಹೆಸರಿನಲ್ಲಿ ಸಮಾಜದ ಜನರು ತಮಗೆ ಬೇಕಾದ ರೀತಿಯಲ್ಲಿ ಧಾರ್ಮಿಕ ಅಂಶಗಳನ್ನು ತಿರುಚಿ ಧರ್ಮವನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಕಾಣಬಹುದು. 'ತ್ರಿವಳಿ ತಲಾಖ್' ನಂತಹ ವಿಚ್ಛೇದನ ಪದ್ಧತಿ ಇಸ್ಲಾಂನಲ್ಲಿ ಇಲ್ಲ. ಆದರೂ ಜನ ತಲಾಕನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ಕಾಣಬಹುದು. ಸಮಾಜದಲ್ಲಿ ಮಹಿಳೆಯರು ಅನುಭವಿಸುವ ನೋವು, ಕಷ್ಟಗಳನ್ನು ಕಥನ ಸಾಹಿತ್ಯದ ಮೂಲಕ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯವನ್ನು ಅವಲೋಕಿಸಿದಾಗ ಇಲ್ಲಿ ಸಂಶೋಧನೆಗೆ ಆರಿಸಿಕೊಂಡ ಆರು ಕಥೆಗಾರರಲ್ಲಿ ಸಾರಾ ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞ್, ಫಕೀರ್ ಮಹಮ್ಮದ್ ಕಟ್ಪಾಡಿ ಇವರ ಕಥೆಗಳಲ್ಲಿ ಬಂಡಾಯದ ಮನೋಭಾವನೆ ಬಹಿರಂಗವಾಗಿ ಎದ್ದು ಕಾಣುತ್ತದೆ. ಇವರ ಕಥೆ, ಕಾದಂಬರಿಗಳಲ್ಲಿ ಸಮಾಜದಲ್ಲಿ ನಡೆಯುವ ಅನಾಚಾರ, ಮೂಢನಂಬಿಕೆ, ಹೆಣ್ಣಿನ ಮೇಲಾಗುವ ದೌರ್ಜನ್ಯಗಳನ್ನು ಬಹಿರಂಗವಾಗಿ ಟೀಕಿಸಲಾಗಿದೆ. ಹೀಗಾಗಿ ಈ ಲೇಖಕರು ಸಮಾಜದ ಧಾರ್ಮಿಕ ಮನೋಭಾವದ ವ್ಯಕ್ತಿಗಳನ್ನು ಎದುರಿಸುವ ಸನ್ನಿವೇಶಗಳು ಉದ್ಭವಗೊಂಡವು.

ಆದರೆ ಶಹನಾಝ್ ಎಂ, ಹಂಝು ಮಲಾರ್, ಅಬ್ದುಲ್ ಕಾದರ್ ಕುಕ್ಕಿಲರಂತಹ ಆಧುನಿಕ ಕಥೆಗಾರರ ಸಾಹಿತ್ಯವನ್ನು ಅವಲೋಕಿಸಿದರೆ ಇವರು ಮುಸ್ಲಿಂ ಸಮುದಾಯದ ಸಮಸ್ಯೆಗಳನ್ನು ಬಹಳ ತಣ್ಣನೆಯ ಭಾವಗಳಿಂದ ವ್ಯಕ್ತಪಡಿಸಿದ್ದಾರೆ. ಇಲ್ಲಿಯ ಕತೆಗಳಲ್ಲಿ ಧಾರ್ಮಿಕ ವಿಡಂಬನೆ ಕಂಡುಬರುವುದಿಲ್ಲ. ಸಮಾಜದಲ್ಲಿ ನಡೆಯುವ ಅವ್ಯವಸ್ಥೆಗಳಿಗೆ ಸಮಾಜದ ಜನರು ಕಾರಣವೇ ಹೊರತು ಧರ್ಮವಲ್ಲ ಎಂಬುದನ್ನು ಇವರು ಕಥೆ, ಕಾದಂಬರಿಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಕುಟುಂಬ ಹಾಗೂ ಸಮಾಜದಲ್ಲಿ ಹೆಣ್ಣು-ಗಂಡೆಂಬ ಭೇದ ಮಾಡಿ ಹೆಣ್ಣನ್ನು ನಿಕೃಷ್ಟವಾಗಿ ಕಾಣುವ ಲಿಂಗ ಅಸಮಾನತೆಯ ಪ್ರವೃತ್ತಿ ಹೇಗೆ ನಡೆದುಕೊಂಡು ಬರುತ್ತಿದೆ ಎಂಬುದನ್ನು ಅಧ್ಯಯನ ಮಾಡಲಾಗಿದೆ. ವರದಕ್ಷಿಣೆಯ ವಿವಿಧ ರೂಪಗಳು ಪ್ರಸ್ತುತ ಸಮಾಜದಲ್ಲಿ ಹೇಗೆ ಚಾಲ್ತಿಯಲ್ಲಿವೆ ಹಾಗೂ ಸಮಾಜ ವರದಕ್ಷಿಣೆಗಾಗಿ ಹೆಣ್ಣಿನ ಜೀವನವನ್ನು ಹೇಗೆ ನರಕಮಯವನ್ನಾಗಿಸುತ್ತಿದೆ ಎಂಬುದನ್ನು ಸಹ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸಾರಾ ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞ್, ಫಕೀರ್ ಮಹಮ್ಮದ್ ಕಟ್ಪಾಡಿ ಈ ಲೇಖಕರ ಕಥನ ಸಾಹಿತ್ಯದಲ್ಲಿ ಬಂಡಾಯದ ಮನೋಭಾವವಿದೆ. ಆದರೆ ಶಹನಾಝ್ ಎಂ. ಹಂಝು ಮಲಾರ್, ಏ.ಕೆ. ಕುಕ್ಕಿಲ ಇವರ ಕಥೆಗಳಲ್ಲಿ ಸ್ಪಷ್ಟವಾಗಿ ಸಮಾಜದ ಜನರ ದೋಷಗಳನ್ನು ಎತ್ತಿಹಿಡಿಯಲಾಗುತ್ತಿದೆ. ಧರ್ಮವು ಒಳ್ಳೆಯದನ್ನೇ ಬೋಧಿಸುತ್ತದೆ. ಆದರೆ ಸಮಾಜದ ಜನರು ತಮಗೆ ಬೇಕಾದಂತೆ ಧರ್ಮವನ್ನು ದುರುಪಯೋಗಪಡಿಸಿಕೊಂಡು ಸಮಾಜವನ್ನು ಕೆಡಿಸುತ್ತಿದ್ದಾರೆ ಎನ್ನುವ ಭಾವ ಈ ಕಥನ ಸಾಹಿತಿಗಳಿಂದ ವ್ಯಕ್ತವಾಗುತ್ತದೆ.

ಸಾಹಿತ್ಯದ ಭಾಷಾ ಶೈಲಿಯೂ ಸಹ ಆರಂಭದ ಲೇಖಕರಲ್ಲಿ ವಿಶೇಷವಾಗಿ ಮುಸ್ಲಿಂ ಹೆಣ್ಣಿನ ಆಕ್ರೋಶವನ್ನು ಬಂಡಾಯದ ಶೈಲಿಯಲ್ಲಿ ಎತ್ತಿ ತೋರಿಸಿದರೆ, ಶಹನಾಝ್ ಎಂ. ಹಂಝು ಮಲಾರ್, ಏ.ಕೆ. ಕುಕ್ಕಿಲರಂತಹ ಆಧುನಿಕ ಮುಸ್ಲಿಂ ಲೇಖಕರು ತಣ್ಣನೆಯ ಭಾವದಿಂದ ವ್ಯಕ್ತಪಡಿಸಿದ್ದಾರೆ. ಸಮಾಜದ ಯಾವುದೇ ಗುಂಪು ಅಥವಾ ಮುಖಂಡರನ್ನು ಎದುರು ಹಾಕಿಕೊಳ್ಳದೆ ಇರುವ ರೀತಿಯಲ್ಲಿ ಇವರ ಕಥೆಗಳು ವ್ಯಕ್ತವಾಗಿವೆ. ಹೀಗೆ ಒಂದೇ ಸಮುದಾಯದ ಲೇಖಕರ ಆಲೋಚನೆಗಳೂ ಸಹ ಆಯಾ ಕಾಲಘಟ್ಟಕ್ಕೆ ಹಾಗೂ ಪರಿಸರಕ್ಕೆ ತಕ್ಕಂತೆ ಭಿನ್ನವಾಗಿರುವುದನ್ನು ಕಾಣಬಹುದು. 'ಪ್ರಸ್ತಾವನೆ'ಯಲ್ಲಿ ಈ ನೆಲೆಗಳನ್ನು ಸ್ಪಷ್ಟವಾಗಿ ಗುರುತಿಸಿಕೊಂಡು, ಒಟ್ಟು ಅಧ್ಯಯನದ ವಿಕಾಸಕ್ಕೆ ಮಾರ್ಗದರ್ಶಕ ಸೂತ್ರಗಳನ್ನು ರೂಪಿಸಿಕೊಳ್ಳಲಾಗಿದೆ. ಸಮಾಜದ ಎಲ್ಲಾ ಮಹಿಳೆಯರ ಸಮಸ್ಯೆಗಳು, ಸಾಮಾಜಿಕ ಸ್ಥಿತಿಗಳು, ಭಾವನೆಗಳು, ನೋವು-ನಲಿವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಾರಾ

ಅಬೂಬಕ್ಕರ್, ಬೊಳುವಾರು ಮಹಮ್ಮದ್ ಕುಂಞ, ಫಕೀರ್ ಮಹಮ್ಮದ್ ಕಟ್ಪಾಡಿ, ಶಹನಾಝ್ ಎಂ, ಏ.ಕೆ. ಕುಕ್ಕಿಲ, ಹಂಝ ಮಲಾರ್ ಇವರ ಕಥನ ಸಾಹಿತ್ಯದ ಮೂಲಕ ಸಮಾಜದ ಮಹಿಳೆಯರ ಕಷ್ಟಕಾರ್ಪಣ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಮಾಜದಲ್ಲಿ ಮಹಿಳೆಯು ವಿದ್ಯಾವಂತಳಾಗುವ ಪ್ರಾಮುಖ್ಯತೆಯನ್ನು, ಹೆಣ್ಣಿನ ವೈವಾಹಿಕ ಜೀವನದ ವಿವಿಧ ಆಯಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಮೊದಲನೇ ಅಧ್ಯಾಯ 'ಮಹಿಳಾ ಪ್ರತಿನಿಧೀಕರಣದ ನೆಲೆಗಳು' - ಇಲ್ಲಿ 'ಮಹಿಳೆ ಮತ್ತು ಕೌಟುಂಬಿಕ ನೆಲೆ' ಹಾಗೂ 'ಮಹಿಳೆ ಮತ್ತು ಸಾಮಾಜಿಕ ನೆಲೆ'ಯಲ್ಲಿ ಕುಟುಂಬ ಹಾಗೂ ಸಮಾಜದಲ್ಲಿ ಹೆಣ್ಣನ್ನು ಗ್ರಹಿಸುವ ನೆಲೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಅಧ್ಯಾಯವನ್ನು ಹಲವಾರು ಉಪವಿಭಾಗಗಳಾಗಿ ಮಾಡಿಕೊಂಡು ಕುಟುಂಬದಲ್ಲಿ ಹೆಣ್ಣು ತ್ಯಾಗಮಯಿ, ಸಹನಾಮಯಿ ಎಂದು ಬಿಂಬಿಸಿ ಆಕೆಯ ಮೇಲೆ ಹೊರಿಸುವ ಜವಾಬ್ದಾರಿಗಳನ್ನು ಚರ್ಚಿಸಲಾಗಿದೆ. ಮುಸ್ಲಿಂ ಸಮಾಜದಲ್ಲಿ ಬಹುಪತ್ನಿತ್ವ ಹಾಗೂ ತಲಾಕ್ ದುರುಪಯೋಗಗೊಂಡು ಹೆಣ್ಣು ಎದುರಿಸುವ ಸಮಸ್ಯೆಗಳ ಕುರಿತು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಸಾಮಾಜಿಕ ಪಿಡುಗುಗಳಾದ ಲಿಂಗ ಅಸಮಾನತೆ, ಬಡತನ, ವರದಕ್ಷಿಣೆ, ಮೂಡನಂಬಿಕೆಗಳ ಕುರಿತು ಚರ್ಚಿಸಲಾಗಿದೆ.

ಎರಡನೇ ಅಧ್ಯಾಯ 'ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬ'ದಲ್ಲಿ ಗೃಹಿಣಿ, ವಿಧವೆ, ವಿಚ್ಛೇದಿತೆ ಹಾಗೂ ಪರಿತ್ಯಕ್ತೆ ಈ ಪಾತ್ರಗಳಲ್ಲಿ ಮಹಿಳೆಯು ಕುಟುಂಬ ಹಾಗೂ ಸಮಾಜದಲ್ಲಿ ಪಡೆಯುವ ಸ್ಥಾನಮಾನ ಹಾಗೂ ಎದುರಿಸುವ ಸಮಸ್ಯೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಗೃಹಿಣಿಯಾಗಿ ಒಬ್ಬಳು ಹೆಣ್ಣು ಕುಟುಂಬ ಹಾಗೂ ಸಮಾಜದಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸುವ ರೀತಿ ಹಾಗೂ ಎಲ್ಲರಿಗೂ ಹೊಂದಿಕೊಂಡು ಸಮತೋಲನ ಕಾಪಾಡಿಕೊಳ್ಳುವುದನ್ನು ಅಧ್ಯಯನ ಮಾಡಲಾಗಿದೆ. ಸಮಾಜದಲ್ಲಿ ವಿಧವೆ, ವಿಚ್ಛೇದಿತೆ ಹಾಗೂ ಪರಿತ್ಯಕ್ತೆಯ ಸ್ಥಾನಮಾನ ಹಾಗೂ ಅವರ ಸಮಸ್ಯೆಗಳನ್ನು ಅರ್ಥಗರ್ಭಿತವಾಗಿ ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯದ ಮೂಲಕ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಮೂರನೆಯ ಅಧ್ಯಾಯ 'ಕಥನ ಸಾಹಿತ್ಯದಲ್ಲಿ ಮಹಿಳಾ ದೌರ್ಜನ್ಯ' ದಲ್ಲಿ ಮಹಿಳೆ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ದೌರ್ಜನ್ಯಕ್ಕೆ ಒಳಗಾಗುವುದನ್ನು ವಿಶ್ಲೇಷಿಸಲಾಗಿದೆ. ಕುಟುಂಬದ ಒಳಗೆ ವಿವಿಧ ಕಾರಣಗಳಿಂದ ಹೆಣ್ಣಿನ ಮೇಲಾಗುವ ದೌರ್ಜನ್ಯ ಹಾಗೂ ಸಮಾಜವು ಹೆಣ್ಣಿನ ಮೇಲೆ ಎಸಗುವ

ದೌರ್ಜನ್ಯವನ್ನು ಚರ್ಚಿಸಲಾಗಿದೆ. ವರದಕ್ಷಿಣೆ, ದೈಹಿಕ ಹಿಂಸೆ, ಸಂತಾನೋತ್ಪತ್ತಿ ಹೀಗೆ ಹಲವಾರು ಕಾರಣಗಳಿಂದ ಹೆಣ್ಣಿನ ಮೇಲಾಗುವ ಅನ್ಯಾಯ ಅವಮಾನಗಳು ಹೆಣ್ಣನ್ನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಜರ್ಜರಿತಳನ್ನಾಗಿಸುತ್ತವೆ. ಹೆಣ್ಣಿನ ಮೇಲಾಗುವ ದೌರ್ಜನ್ಯದ ವಿವಿಧ ಸ್ತರಗಳನ್ನು ಪ್ರಸ್ತುತ ಕಥನ ಸಾಹಿತ್ಯದ ಮೂಲಕ ವಿವೇಚಿಸಲಾಗಿದೆ.

ನಾಲ್ಕನೇ ಅಧ್ಯಾಯ 'ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಆರೋಗ್ಯ'ದಲ್ಲಿ ಮಹಿಳೆಯರ ಆರೋಗ್ಯ ಸಮಸ್ಯೆಗಳ ಕುರಿತು ಅಧ್ಯಯನ ಮಾಡಲಾಗಿದೆ. ಹೆಣ್ಣುಮಕ್ಕಳು ಚಿಕ್ಕಪ್ರಾಯದಲ್ಲಿ ವಿವಾಹವಾಗಿ, ತಾಯಂದಿರಾಗಿ ಆರೋಗ್ಯ ಸಮಸ್ಯೆಗಳಿಗೆ ಗುರಿಯಾಗುತ್ತಾರೆ. ಕುಟುಂಬದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದಾಗಲೂ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಆರೋಗ್ಯ ಕಾಪಾಡಿಕೊಳ್ಳದಿದ್ದರೆ ಉದ್ಭವಿಸುವ ಸಮಸ್ಯೆಗಳ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಐದನೇ ಅಧ್ಯಾಯ ' ಕಥನ ಸಾಹಿತ್ಯದಲ್ಲಿ ಮಹಿಳೆ ಮತ್ತು ಉದ್ಯೋಗ'ದಲ್ಲಿ ಅವಿದ್ಯಾವಂತ ಮಹಿಳೆ ಮತ್ತು ಕಸುಬು' ಹಾಗೂ 'ವಿದ್ಯಾವಂತ ಮಹಿಳೆ ಮತ್ತು ವೃತ್ತಿ' -ಇಲ್ಲಿ ಮಹಿಳೆಯರು ಆರ್ಥಿಕವಾಗಿ ಎದುರಿಸುವ ಸಮಸ್ಯೆಗಳನ್ನು ಹಾಗೂ ಪರಿಹಾರವನ್ನು ಅಧ್ಯಯನ ಮಾಡಲಾಗಿದೆ. ವಿದ್ಯಾವಂತ ಮತ್ತು ಅವಿದ್ಯಾವಂತ ಮಹಿಳೆಯರು ಸಮಾಜದಲ್ಲಿ ಆರ್ಥಿಕವಾಗಿ ಹೇಗೆ ಸ್ವತಂತ್ರರಾಗಲು ಬಯಸುತ್ತಾರೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ.

'ಸಮಾರೋಪ'ದಲ್ಲಿ ನಿಯೋಜಿತ ಸಂಶೋಧನೆಯ ಫಲಿತಾಂಶಗಳನ್ನು ಕ್ರೋಢೀಕರಿಸಿ ನೀಡಲಾಗಿದೆ. ಅನುಬಂಧ- ೧ರಲ್ಲಿ ಪರಾಮರ್ಶನ ಕೃತಿಗಳನ್ನು, ಅನುಬಂಧ-೨ರಲ್ಲಿ ಶಬ್ದಾರ್ಥಗಳನ್ನು ಹಾಗೂ ಅನುಬಂಧ ೩ರಲ್ಲಿ ಲೇಖಕರ ಪರಿಚಯವನ್ನು ನೀಡಲಾಗಿದೆ.

ಅಧ್ಯಯನದ ಫಲಿತಗಳು:

ಸಮಾಜದಲ್ಲಿ ಮಹಿಳೆಯರು ಹಲವು ವಿಧಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರತಿಯೊಬ್ಬ ಮಹಿಳೆಯೂ ವ್ಯಕ್ತಿ ಸ್ವಾತಂತ್ರ್ಯವನ್ನು ಪಡೆಯುವಂತಾಗಬೇಕು ಎಂಬುದು ಅಧ್ಯಯನದಿಂದ ಕಂಡುಕೊಂಡಿರುವ ಬಹುಮುಖ್ಯ ಫಲಿತವಾಗಿದೆ. ಈ ನಿಟ್ಟಿನಲ್ಲಿ ಒಂದು ಸಣ್ಣ ಪ್ರಯತ್ನವೇ ಈ ಸಂಶೋಧನಾ ಅಧ್ಯಯನವಾಗಿದೆ.

ಇಂದು ಕೌಟುಂಬಿಕ ಕಲಹಗಳ ಕಾರಣದಿಂದ ಪತಿ ಪತ್ನಿಯರ ನಡುವೆ ವೈಷಮ್ಯ ಹೆಚ್ಚಾಗಿ ವಿಚ್ಛೇದನಗಳ ಪ್ರಮಾಣ ಹೆಚ್ಚುತ್ತಿದೆ. ಕುಟುಂಬ ಹಾಗೂ ಸಮಾಜದಲ್ಲಿ ವಿವಾಹದ ಪಾವಿತ್ರ್ಯತೆಯನ್ನು ಅರಿತು, ಪತಿ-ಪತ್ನಿಯಾದವರು ಸುಖ-ದುಃಖಗಳೆರಡನ್ನೂ ಸಮಾನತೆಯಿಂದ ಸ್ವೀಕರಿಸಿ ಸಹಬಾಳ್ವೆಯಿಂದ ಬದುಕಿದರೆ ಕೌಟುಂಬಿಕ ಕಲಹಗಳು ಕಡಿಮೆಯಾಗುವ ಸಾಧ್ಯತೆ ಇದೆ ಎಂಬುದನ್ನು ಈ ಅಧ್ಯಯನದಿಂದ ಅರಿತುಕೊಳ್ಳ ಬಹುದು.

ಸಮಾಜದಲ್ಲಿ ಹೆಣ್ಣು ಗೃಹಿಣಿ, ವಿಧವೆ, ವಿಚ್ಛೇದಿತೆ ಹಾಗೂ ಪರಿತ್ಯಕ್ತೆಯಾಗಿ ಪ್ರತಿಯೊಂದು ಹಂತದಲ್ಲೂ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ ಹೆಣ್ಣಿನ ಸ್ಥಾನಮಾನವನ್ನು ಗೌರವಿಸಿ, ಆಕೆಯ ಭಾವನೆಗಳಿಗೆ ಸ್ಪಂದಿಸಿದಾಗ ಸ್ವಾಸ್ಥ್ಯ ಸಮಾಜದ ನಿರ್ಮಾಣ ಸಾಧ್ಯವಿದೆ ಎಂಬುದನ್ನು ಪ್ರಸ್ತುತ ಅಧ್ಯಯನದಿಂದ ಅರಿತುಕೊಳ್ಳಬಹುದು.

ಪ್ರಸ್ತುತ ಸನ್ನಿವೇಶದಲ್ಲಿ ಹೆಣ್ಣು ಕೌಟುಂಬಿಕ ಹಾಗೂ ಸಾಮಾಜಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ತಡೆದು, ಸೂಕ್ತ ಕಾನೂನುಗಳ ಮೂಲಕ ರಕ್ಷಣೆ ಮಾಡುವಲ್ಲಿ ಸರಕಾರ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕೆಂಬುದು ಈ ಅಧ್ಯಯನದಿಂದ ಪ್ರತಿಬಿಂಬಿತವಾಗುತ್ತಿದೆ.

ಬಹುತೇಕ ಹೆಣ್ಣು ಮಕ್ಕಳು ಹಾಗೂ ಮಹಿಳೆಯರು ಅನಾರೋಗ್ಯದ ಸಮಸ್ಯೆಯಿಂದ ಬಳಲುತ್ತಿದ್ದು, ಹೆಣ್ಣಿನ ಆರೋಗ್ಯದ ಕಡೆಗೆ ಗಮನಹರಿಸಬೇಕಾದುದು ಬಹಳ ಮುಖ್ಯವಾಗಿದೆ. ಸ್ವಾಸ್ಥ್ಯ ರಾಷ್ಟ್ರ ನಿರ್ಮಾಣದಲ್ಲಿ ಮಹಿಳಾ ಆರೋಗ್ಯ ಜಾಗೃತಿಯ ಅರಿವು ಮೂಡಿಸುವುದರ ಅಗತ್ಯತೆ ಪ್ರಸ್ತುತ ಅಧ್ಯಯನದಿಂದ ಅರಿತುಕೊಳ್ಳಬೇಕಾದ ಫಲಿತವಾಗಿದೆ.

ಮಹಿಳೆಯು ವಿದ್ಯಾವಂತಳಾಗಿ, ಆರ್ಥಿಕವಾಗಿ ಸ್ವತಂತ್ರಳಾದರೆ ಸ್ವಾವಲಂಬಿಯಾಗಿ ಜೀವನ ಸಾಗಿಸಬಹುದು. ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಕ್ರಮ ಕೈಗೊಳ್ಳಬೇಕು ಎಂಬುದನ್ನು ಪ್ರಸ್ತುತ ಅಧ್ಯಯನದಿಂದ ತಿಳಿದುಕೊಳ್ಳಬಹುದು.

ಸಮಾಜದ ಜನರೂ ಸಹ ಹೆಣ್ಣಿನ ಭಾವನೆಗಳನ್ನು ಆಕೆಯ ಸಮಸ್ಯೆಗಳನ್ನು ಅರ್ಥೈಸಿಕೊಂಡು ಪರಿಹಾರಾತ್ಮಕ ಪ್ರೇರಣೆ ನೀಡುವಂತಾಗಲಿ ಎಂಬುದು ಈ ಮಹಾಪ್ರಬಂಧದ ಅಧ್ಯಯನದ ಆಶಯವಾಗಿದೆ.

ಮುಂದಿನ ಸಂಶೋಧಕರಿಗೆ ಅಧ್ಯಯನದ ಸಾಧ್ಯತೆಗಳು:

ಯಾವುದೇ ಸಂಶೋಧನೆಯಲ್ಲಿ ಇದೇ ಅಂತಿಮ ಫಲಿತ/ವಿಶ್ಲೇಷಣೆ ಎಂದು ಹೇಳಲು ಸಾಧ್ಯವಿಲ್ಲ. ಒಂದು ವಿಷಯದ ಕುರಿತು ಹಲವಾರು ಕೋನಗಳಿಂದ ಸಂಶೋಧನೆ ಮಾಡಲು ಸಾಧ್ಯವಿದೆ.

- ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಮಹಿಳೆ- ಒಂದು ಅಧ್ಯಯನ
- ಕರಾವಳಿ ಮಹಿಳೆಯರ ಕಸುಬು ಕುರಿತು ಸಂಶೋಧನೆ
- ಕುಟುಂಬ ಅಥವಾ ಸಮಾಜದಲ್ಲಿ ಮಹಿಳೆ ನಿರ್ವಹಿಸಬೇಕಾದ ಪಾತ್ರಗಳು
- ೭೦ರ ದಶಕದ ಕರಾವಳಿ ಮುಸ್ಲಿಂ ಕಥನ ಸಾಹಿತಿಗಳು ಹಾಗೂ ಆಧುನಿಕ ಕರಾವಳಿ ಮುಸ್ಲಿಂ ಕಥನ ಸಾಹಿತಿಗಳು- ಒಂದು ತೌಲನಿಕ ಅಧ್ಯಯನ
- ಸಾರಾ ಅಬೂಬಕ್ಕರ್, ಬೊಳುವಾರು ಮಹಮದ್ ಮೊಹಮ್ಮದ್ ಕುಂಞಿ, ಫಕೀರ್ ಮೊಹಮ್ಮದ್ ಕಟ್ಪಾಡಿ, ಶಹನಾಝ್ ಎಂ, ಹಂಝ ಮಲಾರ್, ಅಬ್ದುಲ್ ಖಾದರ್ ಕುಕ್ಕಿಲ ಇವರ ವೈಯಕ್ತಿಕ ಅಥವಾ ಸಮಗ್ರ ಸಾಹಿತ್ಯದ ಅಧ್ಯಯನ ಕೈಗೊಳ್ಳಬಹುದು.

ಪ್ರಸ್ತುತ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದಲ್ಲಿ ಆಗುತ್ತಿರುವ ಹೊಸ ಬದಲಾವಣೆಗಳು:

ಕರಾವಳಿ ಕನ್ನಡ ಮುಸ್ಲಿಂ ಕಥನ ಸಾಹಿತ್ಯವನ್ನು ಅವಲೋಕಿಸಿದಾಗ ಇಲ್ಲಿ ಬರುವ ಮಹಿಳೆಯರ ಚಿತ್ರಣವು ಪ್ರಸ್ತುತ ಸಮಾಜಕ್ಕಿಂತ ಭಿನ್ನವಾಗಿದೆ. ಸಾಹಿತ್ಯದಲ್ಲಿ ಅವಿದ್ಯಾವಂತ, ನಿರುದ್ಯೋಗಿ ಮಹಿಳೆ ಹಾಗೂ ಅಸಹಾಯಕ ಹೆಣ್ಣಿನ ಚಿತ್ರಣ ಕಂಡುಬರುತ್ತದೆ. ಆದರೆ ಪ್ರಸ್ತುತ ಸಮಾಜದಲ್ಲಿ ಮುಸ್ಲಿಂ ಹೆಣ್ಣು ತನ್ನತನವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾಳೆ. ಸಮಾಜದಲ್ಲಿ ಮಹಿಳಾ ಸಬಲೀಕರಣವನ್ನು ಕಾಣಬಹುದು. ಮುಸ್ಲಿಂ ಹೆಣ್ಣು ಮಕ್ಕಳು ಪ್ರತಿಯೊಂದು ಕ್ಷೇತ್ರದಲ್ಲೂ ಸಾಧನೆಯನ್ನು ಮಾಡುತ್ತಿದ್ದಾರೆ.

೧. ಶೈಕ್ಷಣಿಕ ವಲಯ: ಆಧುನಿಕ ಜಗತ್ತಿನಲ್ಲಿ ಮುಸ್ಲಿಂ ಮಹಿಳೆ ಶೈಕ್ಷಣಿಕ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿಯನ್ನು ಕಂಡುಕೊಂಡಿದ್ದಾಳೆ. ಮುಸ್ಲಿಂ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದೆ ಮನೆ ಕೆಲಸದಲ್ಲಿ ತೊಡಗಿಸುವ ಪ್ರವೃತ್ತಿಯು ಈಗ ಕಣ್ಮರೆಯಾಗಿದೆ. ಮುಸ್ಲಿಂ ಹೆಣ್ಣು ಮಕ್ಕಳು ಶಾಲೆ ಕಲಿತು ಉನ್ನತ ವಿದ್ಯಾಭ್ಯಾಸವನ್ನು ಪಡೆದುಕೊಳ್ಳುತ್ತಿದ್ದಾರೆ. ಉನ್ನತ ಶಿಕ್ಷಣವನ್ನು ಪಡೆದ ಮುಸ್ಲಿಂ ಹೆಣ್ಣು ಮಕ್ಕಳು ತಮ್ಮ ಜೀವನದ ಬಗ್ಗೆ ಜಾಗೃತರಾಗಿ ತಮ್ಮ ಭವಿಷ್ಯದ ಉತ್ತಮ ನಿರ್ಧಾರವನ್ನು ತಾವೇ ಕಂಡುಕೊಳ್ಳಲು ಸಹಾಯಕವಾಗಿದೆ.

೧. ಕ್ರೀಡಾ ವಲಯ: ಮುಸ್ಲಿಂ ಹೆಣ್ಣು ಮಕ್ಕಳು ಕ್ರೀಡಾ ಕ್ಷೇತ್ರದಲ್ಲೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದುಕೊಂಡಿದ್ದಾರೆ. ಪ್ರಸ್ತುತ ಸಮಾಜದಲ್ಲಿ ಮುಸ್ಲಿಂ ಹೆಣ್ಣು ಮಕ್ಕಳು ವಿದ್ಯಾಭ್ಯಾಸವನ್ನು ಪಡೆದು ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯಿಂದ ದೇಶಕ್ಕೆ ಕೀರ್ತಿ ತಂದು ಕೊಟ್ಟಿದ್ದಾರೆ. ಮೈಸೂರಿನ ಎನ್. ಆರ್. ಮೊಹಲ್ಲಾ ನಿವಾಸಿ ರಿಫಾ ತಸ್ಕೀನ್ ಏಳು ವರ್ಷದ ಬಾಲಕಿಯಾಗಿದ್ದಾಗಲೇ ಹದಿನಾಲ್ಕು ರೀತಿಯ ವಾಹನಗಳನ್ನು ಓಡಿಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ನಲ್ಲಿ ದಾಖಲೆ ಮಾಡಿದ್ದಾಳೆ. ಈಗ ಹನ್ನೆರಡು ವರ್ಷದವಳಾಗಿದ್ದು ವಿಮಾನ ಹಾಗೂ ರೈಲು ಚಲಾಯಿಸಿದ್ದಾಳೆ.

೨. ಔದ್ಯೋಗಿಕ ವಲಯ: ಔದ್ಯೋಗಿಕ ಕ್ಷೇತ್ರಗಳಲ್ಲೂ ಮುಸ್ಲಿಂ ಮಹಿಳೆಯರು ಪ್ರಗತಿಯನ್ನು ಸಾಧಿಸಿದ್ದಾರೆ. ಆರ್ಥಿಕವಾಗಿ ಸ್ವತಂತ್ರರಾಗಲು ವಿವಿಧ ಉದ್ಯೋಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ವಿದ್ಯಾವಂತ ಮಹಿಳೆಯರು ಡಾಕ್ಟರ್, ಇಂಜಿನಿಯರ್, ಪತ್ರಕರ್ತೆ, ಶಿಕ್ಷಕಿ, ನರ್ಸ್, ಪೊಲೀಸ್ ಮೊದಲಾದ ವೃತ್ತಿಗಳನ್ನು ಆರಿಸಿಕೊಂಡು ಆರ್ಥಿಕವಾಗಿ ತಮ್ಮ ಕುಟುಂಬಗಳಿಗೆ ನೆರವಾಗುತ್ತಿದ್ದಾರೆ. ಶಹನಾಜ್ ಹುಸೇನ್, ಫರಾ ಆರಿಫ್ ಖಾನ್ ಮೊದಲಾದ ಮುಸ್ಲಿಂ ಮಹಿಳೆಯರು ವ್ಯಾಪಾರ ಉದ್ಯಮ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದು ಪದ್ಮವಿಭೂಷಣ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಸಿನಿಮಾ ರಂಗದಲ್ಲೂ ಹೆಣ್ಣು ಮಕ್ಕಳು ಕಾರ್ಯ ನಿರ್ವಹಿಸುತ್ತಿರುವುದನ್ನು ಕಾಣಬಹುದು. ಹೆಣ್ಣು ಆರ್ಥಿಕವಾಗಿ ಸದೃಢಳಾದಾಗ ತನ್ನ ಸಂಸಾರವನ್ನು ಸಮತೋಲನದಿಂದ ಕಾಪಾಡಿಕೊಂಡು ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ.

೪. ರಾಜಕೀಯ ವಲಯ: ರಾಜಕೀಯ ವಲಯದಲ್ಲಿ ಮುಸ್ಲಿಂ ಮಹಿಳೆಯರು ಕಾರ್ಯಪ್ರವೃತ್ತರಾಗಿದ್ದಾರೆ. ಮಹಿಳೆಯರು ಚುನಾವಣೆಯಲ್ಲಿ ಬಹುಮತಗಳಿಂದ ಆಯ್ಕೆಗೊಂಡು ರಾಜಕೀಯ ರಂಗದಲ್ಲಿ ತಮ್ಮ ಕೌಶಲ್ಯವನ್ನು ತೋರಿಸುತ್ತಿದ್ದಾರೆ.

೫. ಸಾಮಾಜಿಕ ವಲಯ: ಸಾಮಾಜಿಕವಾಗಿ ಆಧುನಿಕ ಮುಸ್ಲಿಂ ಮಹಿಳೆ ಪ್ರಗತಿಯನ್ನು ಸಾಧಿಸಿದ್ದಾಳೆ. ಇದಕ್ಕೆ ಉತ್ತಮ ಉದಾಹರಣೆ ತ್ರಿವಳಿ ತಲಾಕ್ ನಿಷೇಧ. ಮುಸ್ಲಿಂ ಧರ್ಮದಲ್ಲಿ ಅಥವಾ ಧರ್ಮ ಗ್ರಂಥಗಳಲ್ಲಿ ತ್ರಿವಳಿ ತಲಾಖ್ ಪದ್ಧತಿ ಇಲ್ಲ. ಆದರೆ ಸಮಾಜದ ಕೆಲವು ಅಸ್ಪಷ್ಠ ಮನಸ್ಸಿನವರು ತ್ರಿವಳಿ ತಲಾಖ್ ಅನ್ನು ನೀಡಿ ಹೆಣ್ಣಿನ ಜೀವನವನ್ನು ನಾಶಪಡಿಸುತ್ತಾರೆ. ಸರಕಾರದ ತ್ರಿವಳಿ ತಲಾಖ್ ನಿಷೇಧ ಕಾಯ್ದೆ ಸ್ತ್ರೀ ಸ್ವಾತಂತ್ರ್ಯಕ್ಕೆ ದಿಟ್ಟ ಹೆಜ್ಜೆಯೆನ್ನಬಹುದು. ಇದರಿಂದಾಗಿ ಹಲವಾರು ಮುಸ್ಲಿಂ ಹೆಣ್ಣು ಮಕ್ಕಳು

ತಮ್ಮ ಜೀವನವನ್ನು ಉತ್ತಮ ರೀತಿಯಲ್ಲಿ ನಡೆಸುವಂತಾಗಿದೆ. ಯಾರು ಕೂಡಾ ಧರ್ಮವನ್ನು ದುರುಪಯೋಗ ಮಾಡುವ ಅವಕಾಶ ಇಲ್ಲದಂತಾಗಿದೆ.

ಸಮಾಜದಲ್ಲಿ ಬಹುಪತ್ನಿತ್ವವು ಈಗ ಕಣ್ಮರೆಯಾಗುತ್ತಿದೆ. ವಿದ್ಯಾವಂತ ಮಹಿಳೆ ತನ್ನ ಜೀವನದಲ್ಲಿ ಅನ್ಯಾಯವು ಸಂಭವಿಸಿದಾಗ ಕಾನೂನಿನ ಮೊರೆ ಹೋಗುವುದನ್ನು ಕಾಣಬಹುದು.

ವರದಕ್ಷಿಣೆ ನಿಷೇಧ ಕಾಯ್ದೆಯಿಂದಾಗಿ ಹೆಣ್ಣು ಮಕ್ಕಳು ನೆಮ್ಮದಿಯಿಂದ ವೈವಾಹಿಕ ಜೀವನವನ್ನು ನಡೆಸಲು ಅನುವು ಮಾಡಿಕೊಟ್ಟಂತಾಗಿದೆ. ವರದಕ್ಷಿಣೆಯ ಪಿಡುಗಿನಿಂದ ನಡೆಯುವ ದುರಂತಗಳು ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಿವೆ.

ಅತ್ಯಂತ ಚಿಕ್ಕ ವಯಸ್ಸಿನಲ್ಲಿ ನಡೆಯುತ್ತಿದ್ದ ಮುಸ್ಲಿಂ ಹೆಣ್ಣು ಮಕ್ಕಳ ವಿವಾಹದ ಪ್ರಮಾಣವು ಪ್ರಸ್ತುತ ಸಮಾಜದಲ್ಲಿ ಬಹಳಷ್ಟು ಕಡಿಮೆಯಾಗಿದೆ. ಸರಕಾರ ಹೊರಡಿಸಿದ ಹೆಣ್ಣು ಮಕ್ಕಳ ಕಡ್ಡಾಯ ಶಿಕ್ಷಣ ನೀತಿಯಿಂದಾಗಿ ಸಮಾಜದ ಎಲ್ಲಾ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆಯುವಂತಾಗಿದೆ. ಹೆಣ್ಣು ಮಕ್ಕಳ ವಿವಾಹದ ವಯಸ್ಸನ್ನು ಹದಿನೆಂಟು ವರ್ಷಗಳಿಗೆ ನಿಗದಿಪಡಿಸಿರುವುದರಿಂದ ಬಾಲ್ಯ ವಿವಾಹವು ಕಡಿಮೆಯಾಗಿದೆ. ಇದರಿಂದಾಗಿ ಮುಸ್ಲಿಂ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿ ತಾಯಂದಿರಾಗಿ ಅನಾರೋಗ್ಯ ಪೀಡಿತರಾಗುವುದು ಕಡಿಮೆಯಾಗಿದೆ ಹಾಗೂ ಪ್ರತಿಯೊಬ್ಬ ಹೆಣ್ಣು ತನ್ನ ಆರೋಗ್ಯದ ಬಗ್ಗೆ ಕಾಳಜಿಯನ್ನು ವಹಿಸುವಂತಾಗಿದೆ.

ಆಕರ ಗ್ರಂಥಗಳು

ಕಾದಂಬರಿಗಳು:

- ಫಕೀರ್ ಮಹಮ್ಮದ್ ಕಟ್ಪಾಡಿ;೧೯೮೯, ಸರಕುಗಳು; ನವಕರ್ನಾಟಕ ಪ್ರಕಾಶನ.
- ಫಕೀರ್ ಮಹಮ್ಮದ್ ಕಟ್ಪಾಡಿ; ೧೯೯೭, ಕಚ್ಚಾದ; ಶೇಷಾದ್ರಿಪುರಂ ಬೆಂಗಳೂರು
- ಬೊಳುವಾರು ಮಹಮ್ಮದ್ ಕುಂಞ; ೧೯೮೭; ಜೆಹಾದ್; ನವ ಕರ್ನಾಟಕ ಪ್ರಕಾಶನ, ಕ್ರೆಸೆಂಟ್ ರಸ್ತೆ, ಬೆಂಗಳೂರು
- ಬೊಳುವಾರು ಮಹಮ್ಮದ್ ಕುಂಞ; ೨೦೧೮; ಉಮ್ಮಾ; ಮುತ್ತುಪ್ಪಾಡಿ ಪುಸ್ತಕ, ಬೆಂಗಳೂರು
- ಶಹನಾಝ್ ಎಂ; ಆಸರೆ; ೨೦೦೪, ತಾಜ್ ಪಬ್ಲಿಕೇಶನ್, ಮಂಗಳೂರು
- ಸಾರಾ ಅಬೂಬಕ್ಕರ್; ೧೯೮೪, ಚಂದ್ರಗಿರಿ ತೀರದಲ್ಲಿ; ಚಂದ್ರಗಿರಿ ಪ್ರಕಾಶನ, ಮಂಗಳೂರು
- ಸಾರಾ ಅಬೂಬಕ್ಕರ್;೧೯೮೫, ಸಹನಾ; ಚಂದ್ರಗಿರಿ ಪ್ರಕಾಶನ, ಮಂಗಳೂರು
- ಸಾರಾ ಅಬೂಬಕ್ಕರ್; ೧೯೮೮, ವಜ್ರಗಳು; ನವಕರ್ನಾಟಕ ಪ್ರಕಾಶನ, ಬೆಂಗಳೂರು.
- ಸಾರಾ ಅಬೂಬಕ್ಕರ್; ೧೯೯೧, ಕದನ ವಿರಾಮ; ಸ್ನೇಹ ಪ್ರಕಾಶನ, ಬೆಂಗಳೂರು
- ಸಾರಾ ಅಬೂಬಕ್ಕರ್; ೨೦೧೧, ಇಳಿಜಾರು; ಚಂದ್ರಗಿರಿ ಪ್ರಕಾಶನ, ಮಂಗಳೂರು
- ಹಂಝ ಮಲಾರ್; ೨೦೦೦, ಅರಬಿ ಕಡಲಿಗೆ ಪರದೆ; ಎನ್. ಆರ್. ಎಲ್. ಪಬ್ಲಿಷಿಂಗ್ ಹೌಸ್ ಬೆಂಗಳೂರು;
- ಹಂಝ ಮಲಾರ್; ೨೦೦೬, ಫಾತಿಮಾಳ ಕನಸು; ಗಿರೀಶ್ ಎಂಟಪ್ರೈಸಸ್, ಬೆಂಗಳೂರು
- ಹಂಝ ಮಲಾರ್; ೨೦೦೮, ತಳಮಳ; ಗಿರೀಶ್ ಎಂಟಪ್ರೈಸಸ್, ಬೆಂಗಳೂರು

ಕಥಾಸಂಕಲನಗಳು:

- ಅಬ್ದುಲ್ ಕಾದರ್ ಕುಕ್ಕಿಲ;೨೦೦೩, ದಾಯಿರಾ (ಕಥಾಸಂಕಲನ); ಜನಪರ ಪ್ರಕಾಶನ, ಮಂಗಳೂರು
- ಅಬ್ದುಲ್ ಕಾದರ್ ಕುಕ್ಕಿಲ;೨೦೧೦, ಅಮ್ಮನ ಕೋಣೆಗೆ ಏ.ಸಿ. (ಕಥಾಸಂಕಲನ); ಅಪರಂಜಿ ಪ್ರಕಾಶನ, ಚಿಕ್ಕಮಗಳೂರು
- ಫಕೀರ್ ಮಹಮ್ಮದ್ ಕಟ್ಪಾಡಿ; ೧೯೮೯, ನೋಂಬು ಮತ್ತು ಆಯ್ದ ಕಥೆಗಳು; ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
- ಫಕೀರ್ ಮಹಮ್ಮದ್ ಕಟ್ಪಾಡಿ; ೦೦೧, ದಜ್ಜಾಲ ಮತ್ತು ಇತರ ಕತೆಗಳು (ಕಥಾಸಂಕಲನ); ಸಿ ವಿ ಜಿ ಪಬ್ಲಿಕೇಷನ್ಸ್ ,ಬೆಂಗಳೂರು
- ಬೊಳುವಾರು ಮಹಮ್ಮದ್ ಕುಂಞಿ; ೧೯೮೬, ಅಂಕ(ಕಥೆಗಳು);ಸಾಹಿತ್ಯ ಪ್ರಕಾಶನ, ಶಿವಮೊಗ್ಗ.
- ಬೊಳುವಾರು ಮಹಮ್ಮದ್ ಕುಂಞಿ; ೧೯೭೯, ಅತ್ತ-ಇತ್ತಗಳ ಸುತ್ತಮುತ್ತ (ಕಥಾಸಂಕಲನ); ನೆಲೆಮನೆ ಪ್ರಕಾಶನ.
- ಬೊಳುವಾರು ಮಹಮ್ಮದ್ ಕುಂಞಿ; ೧೯೮೩, ದೇವರುಗಳ ರಾಜ್ಯದಲ್ಲಿ (ಕತೆಗಳು); ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು.
- ಬೊಳುವಾರು ಮಹಮ್ಮದ್ ಕುಂಞಿ; ೧೯೯೨, ಆಕಾಶಕ್ಕೆ ನೀಲಿ ಪರದೆ (ಕತೆಗಳು); ಅಂಕಿತ ಪುಸ್ತಕ (ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು); ೫೩, ಗಾಂಧಿ ಬಜಾರ್ ಮುಖ್ಯ ರಸ್ತೆ, ಬಸವನಗುಡಿ

- ಶಹನಾಝ್ ಎಂ;೨೦೦೦, ಮೆಟ್ಟಿಲುಗಳು (ಕಥಾಸಂಕಲನ); ಅಮೃತನಗರ ಪಾಂಡೇಶ್ವರ, ಮಂಗಳೂರು
- ಶಹನಾಝ್ ಎಂ; ೨೦೦೪, ಅವಳ ಧ್ವನಿ (ಕಥಾಸಂಕಲನ); ತಾಜ್ ಪಬ್ಲಿಕೇಶನ್,ಅಮೃತನಗರ, ಪಾಂಡೇಶ್ವರ, ಮಂಗಳೂರು
- ಸಾರಾ ಅಬೂಬಕ್ಕರ್; ೧೯೮೯, ಚಪ್ಪಲಿಗಳು (ಕಥಾಸಂಕಲನ); ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು
- ಸಾರಾ ಅಬೂಬಕ್ಕರ್; ೧೯೯೨, ಪಯಣ ಮತ್ತು ಇತರ ಕಥೆಗಳು (ಕಥಾಸಂಕಲನ); ಪುಸ್ತಕ ಪ್ರಕಾಶನ ಸರಸ್ವತಿಪುರಂ ಮೈಸೂರು
- ಸಾರಾ ಅಬೂಬಕ್ಕರ್; ೧೯೯೬, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು (ಕಥಾಸಂಕಲನ); ಚಂದ್ರಗಿರಿ ಪ್ರಕಾಶನ
- ಸಾರಾ ಅಬೂಬಕ್ಕರ್;೧೯೯೮, ಖೆಡ್ಡಾ (ಕಥಾಸಂಕಲನ); ಚಂದ್ರಗಿರಿ ಪ್ರಕಾಶನ, ಮಂಗಳೂರು
- ಸಾರಾ ಅಬೂಬಕ್ಕರ್; ೨೦೧೧, ಸಮಗ್ರ ಕಥೆಗಳು, ಭಾಗ-೨; ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಮುಖ್ಯ ಬೀದಿ ಗುಲ್ಬರ್ಗಾ
- ಸಾರಾ ಅಬೂಬಕ್ಕರ್; ೨೦೧೩, ಸಂದೇಹದ ಸುಳಿಯಲ್ಲಿ (ಸಮಗ್ರ ಕಥೆಗಳು ಭಾಗ-3); ಚಂದ್ರಗಿರಿ ಪ್ರಕಾಶನ, ಮಂಗಳೂರು
- ಹಂಝ ಮಲಾರ್;೨೦೦೧, ನೀಲಿ ಕಣ್ಣಿನ ಬಿಳಿ ಹುಡುಗ (ಕಥಾಸಂಕಲನ); ಪ್ರಭು ಪ್ರಿಂಟರ್ಸ್ ಅಂಡ್ ಪಬ್ಲಿಶರ್ಸ್, ಬೆಂಗಳೂರು

- ಹಂಝ ಮಲಾರ್;೨೦೦೨, ಹೂ ಮನಸ್ಸಿನ ಕಥೆಗಾರ (ಕಥಾಸಂಕಲನ); ಛಾಯಾ ಸಾಹಿತ್ಯ, ಬೆಂಗಳೂರು
- ಹಂಝ ಮಲಾರ್;೨೦೦೨, ಮಾಂಸ ತೂಗುವ ಹುಡುಗ (ಕಥಾಸಂಕಲನ); ಜೆಎನ್ ಸಿ ಪಬ್ಲಿಷರ್ಸ್, ಬೆಂಗಳೂರು
- ಹಂಝ ಮಲಾರ್; ೨೦೦೩, ಸೂಫಿ ಬ್ಯಾರಿಯ ಝಕಾತ್ ಯಾತ್ರೆ (ಕಥಾಸಂಕಲನ); ದುರ್ಗಾ ಬುಕ್ ಹೌಸ್, ವಿಜಯನಗರ, ಬೆಂಗಳೂರು
- ಹಂಝ ಮಲಾರ್;೨೦೦೩, ಕೆಂಪು ಕಣ್ಣಿನ ಹುಡುಗಿ (ಕಥಾಸಂಕಲನ); ವರ್ಷ ಎಂಟರ್ಪ್ರೈಸಸ್, ಬೆಂಗಳೂರು
- ಹಂಝ ಮಲಾರ್; ೨೦೦೩, ಒಬ್ಬ ದೇಶಪ್ರೇಮಿಯ ಒಲವು (ಕಥಾಸಂಕಲನ); ಸಂವಹನ, ಶಿವರಾಂಪೇಟೆ ಮೈಸೂರು
- ಹಂಝ ಮಲಾರ್; ೨೦೦೩, ಸೀದಿ ಅಜ್ಜನ ಡೋಲು (ಕಥೆಗಳು); ವಿನ್ ಷಾ ಎಂಟರ್ಪ್ರೈಸಸ್ ಬೆಂಗಳೂರು
- ಹಂಝ ಮಲಾರ್; ೨೦೦೪, ಬಿಳಿಗಡ್ಡದ ಮನುಷ್ಯ (ಕಥಾ ಸಂಕಲನ); ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು
- ಹಂಝ ಮಲಾರ್; ೨೦೦೫, ಅದರಾಚೆ ಊರೇ ಇಲ್ಲ(ಕಥಾಸಂಕಲನ); ಸಾರಾ ಎಂಟರ್ಪ್ರೈಸಸ್ ಮೈಸೂರು
- ಹಂಝ ಮಲಾರ್; ೨೦೦೫, ಬೂದಿ ಮುಚ್ಚಿದ ಕೆಂಡ (ಕಥಾಸಂಕಲನ); ಸಾರಾ ಎಂಟರ್ಪ್ರೈಸಸ್ ಸುಭಾಷ್ ನಗರ, ಮೈಸೂರು

- ಹಂಝ ಮಲಾರ್; ೨೦೦೫, ಸೈತಾನನ ದಿನಗಳು(ಕಥಾಸಂಕಲನ); ಸಾರಾ ಎಂಟರ್ಪ್ರೈಸಸ್, ಮೈಸೂರು
- ಹಂಝ ಮಲಾರ್; ೨೦೦೮, ಬುರ್ಕಾದ ಕಣ್ಣು(ಕಥಾಸಂಕಲನ); ಗಿರೀಶ್ ಎಂಟರ್ಪ್ರೈಸಸ್, ಬೆಂಗಳೂರು
- ಹಂಝ ಮಲಾರ್;೨೦೧೨,ಅಜ್ಜಿ ಸಾಕಿದ ಪುಳ್ಳಿ (ಕಥಾಸಂಕಲನ); ಛಾಯಾ ಸಾಹಿತ್ಯ, ಬೆಂಗಳೂರು
- ಹಂಝ ಮಲಾರ್;೨೦೨೦, ಹೆಸರೇ ಇಲ್ಲದ ಊರಲ್ಲಿ (೨೨ ಕಥೆಗಳ ಗುಚ್ಛ); ರೂಪ ಪ್ರಕಾಶನ, ಮೈಸೂರು

ಪರಾಮರ್ಶನ ಗ್ರಂಥಗಳು:

- ಅಬ್ದುಲ್ ಖಾದರ್ ಕುಕ್ಕಿಲ; ೨೦೧೬, ಸರಸ ಸಲ್ಲಾಪ (ಲಲಿತ ಪ್ರಬಂಧಗಳು); ಬಿಳಿಚುಕ್ಕೆ ಪ್ರಕಾಶನ, ಮಂಗಳೂರು
- ಇಂದಿರಾ ಆರ್; ೧೯೯೫, ಸ್ತ್ರೀವಾದಿ ದಿಕ್ಸೂಚಿ; ಸಮತ ಅಧ್ಯಯನ ಕೇಂದ್ರ, ಮೈಸೂರು
- ಇಂದಿರಾ ಆರ್; ೧೯೯೫, ಸ್ತ್ರೀವಾದಿ ದಿಕ್ಸೂಚಿ; ಸಮತಾ ಅಧ್ಯಯನ ಕೇಂದ್ರ, ಮೈಸೂರು
- ಇಂದಿರಾ ಆರ್ ;೨೦೦೨, ಮಹಿಳೆ, ಸಮಾಜ ಮತ್ತು ಸಂಸ್ಕೃತಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ
- ಕನ್ನಡದಲ್ಲಿ ಸಣ್ಣ ಕಥೆಗಳು- ವಿಕಿಪೀಡಿಯ; https://kn.m.wikipedia.org>wiki
- ಕನ್ನಡ ಸಂಪದ; ಸಾಹಿತ್ಯ;೨೦೨೦, ಅಕ್ಟೋಬರ್ ೨೨; https://m.facebook.com>photos

- ಕಮಲಾ ಹಂಪನಾ;೨೦೧೮, ಬಲಾಕ- ಪ್ರಬಂಧಗಳ ಸಂಕಲನ; ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು
- ಕಲಬುರ್ಗಿ ಎಂ. ಎಂ; ೨೦೧೯ ಕನ್ನಡ ಸಂಶೋಧನ ಶಾಸ್ತ್ರ; ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು
- ಕಲಿಗಣನಾಥ ಗುಡದೂರು; ೩೧ ಜನವರಿ, ೨೦೧೯, ಸಂಪದ 'ಹೊಸ ಚಿಗುರು, ಹಳೆ ಬೇರು'- ಕನ್ನಡ ಕಥೆಗಳ ಹೊಸ ಜಾಡು;
- ಕಸ್ತೂರಿ ಬ. ದಳವಾಯಿ; ೨೦೦೫, ಕಥೆ-ಕಾದಂಬರಿಗಳಲ್ಲಿ ಮುಸ್ಲಿಂ ಮಹಿಳಾ ಸಂವೇದನೆ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಕೇಶವ ಶರ್ಮ ಕೆ; ೨೦೧೩, ಸ್ತ್ರೀವಾದಿ ಪರಿಕಲ್ಪನೆಗಳು; ದೇಸೀ ಪುಸ್ತಕ ಪ್ರಕಾಶನ, ಬೆಂಗಳೂರು
- ಕೋದಂಡರಾಮ ಎನ್. ಕೆ; ೧೯೯೭, ಕನ್ನಡ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ; ಗಾಯತ್ರಿ ಸ್ಮಾರಕ ಗ್ರಂಥ ಮಾಲೆ, ಮೈಸೂರು
- ಗೀತಾ ಕೃಷ್ಣಮೂರ್ತಿ;೧೭ ಮೇ,೨೦೧೪, ಪ್ರಜಾವಾಣಿ
- ಘಂಟಿ ಎಂ.ಎಸ್; ೧೯೯೦, ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ- ಒಂದು ಅಧ್ಯಯನ; ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ
- ಚಿಕ್ಕನಗೌಡ ಎಸ್. ಎಸ್; ೨೦೧೩, ಮಹಿಳಾ ಸಣ್ಣಕಥೆಗಳಲ್ಲಿ ಕೌಟುಂಬಿಕ ಸಮಸ್ಯೆಗಳು; ಕರ್ನಾಟಕ ವಿಶ್ವವಿದ್ಯಾನಿಲಯ
- ತಾರಿಣಿ ಶುಭದಾಯಿನಿ; ನವೆಂಬರ್ ೧೬,೨೦೧೧, ಕನ್ನಡ ಸಾಹಿತ್ಯ: ಸ್ತ್ರೀ ಸಂವೇದನೆಯ ನೆಲೆಗಳು; ಚಿಲುಮೆ- ಕನ್ನಡ ಸಾಹಿತ್ಯ ತಾಣ

- ದಿವ್ಯ ಕುರಾನ್ ಅನುವಾದ ಮಂಡಳಿ; ೧೯೭೮, ದಿವ್ಯ ಕುರಾನ್ ಅರಬ್ಬಿ ಮೂಲ ಸಹಿತ ಕನ್ನಡಾನುವಾದ; ಇಸ್ಲಾಮಿ ಸಾಹಿತ್ಯ ಪ್ರಕಾಶನ ಕರ್ನಾಟಕ
- ನಾಗಪ್ಪಗೌಡ ಆರ್; ೨೦೧೮, ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪಲ್ಲಟದ ಸ್ವರೂಪಗಳು; ಪ್ರಸಾರಂಗ, ಮಂಗಳೂರು ವಿಶ್ವವಿದ್ಯಾನಿಲಯ
- ನಿಕೇತನ; ೨೦೦೫; ಸ್ತ್ರೀ ದೃಷ್ಟಿ; ರಾಶಿ ಪ್ರಕಾಶನ 'ಶಾಲಿ ನಿಕೇತನ'; ಲಯನ್ಸ್ ಭವನದ ಹತ್ತಿರ ಬ್ರಹ್ಮಗಿರಿ, ಉಡುಪಿ
- ನಿಮ್ಮ ಅಂಕಣ-ವಿಧವೆಯರ ಸಬಲೀಕರಣ?; ೨೩ ಜೂನ್, ೨೦೧೮, ಸಮಾಜ ಸರಕಾರದ ಹೊಣೆ ಏನು
- ಪಲ್ಲವಿ ಎನ್; ೨೦೧೭, ವೈದೇಹಿ ಮತ್ತು ಸಾರಾ ಅಬೂಬಕ್ಕರ್ ಅವರ ಸಾಹಿತ್ಯದಲ್ಲಿನ ಸ್ತ್ರೀವಾದಿ ನೆಲೆಗಳು; ಕುವೆಂಪು ಅಧ್ಯಯನ ಕೇಂದ್ರ, ಮೈಸೂರು ವಿವಿ
- ಪ್ರೀತಿ ಶುಭಚಂದ್ರ; ಗಾಂಧಿವಾದ, ಸ್ತ್ರೀವಾದ ಮತ್ತು ಹೊಸಗನ್ನಡ ಸಾಹಿತ್ಯದಲ್ಲಿ ಮಹಿಳಾ ವಸ್ತು ನಿರ್ವಹಣೆ; www.nammabanavasi.com>...
- ಬರಗೂರು ರಾಮಚಂದ್ರಪ್ಪ (ಸಂ); ೨೦೦೬; ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ; ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ರಿಜಿಸ್ಟ್ರಾರ್; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು
- ಬರಗೂರು ರಾಮಚಂದ್ರಪ್ಪ (ಸಂ); ೨೦೦೬; ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ; ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ರಿಜಿಸ್ಟ್ರಾರ್; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು
- ಭೈರಪ್ಪ.ಕೆ; ೨೦೧೮, ಸಮಗ್ರ ಭಾರತೀಯ ಸಮಾಜ; ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು
- ಭೈರಪ್ಪ ಎಸ್.ಎಲ್. ; ೧೯೬೪, ಕಥೆ ಮತ್ತು ಕಥಾವಸ್ತು; ಸಾಹಿತ್ಯ ಭಂಡಾರ, ಹುಬ್ಬಳ್ಳಿ.

* ಭೈರಪ್ಪ ಕೆ; ೨೦೧೮, ಸಮಗ್ರ ಭಾರತೀಯ ಸಮಾಜ; ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು
* ಮಹಾದೇವಪ್ಪ; ೨೦೧೯, ಕನ್ನಡ ಮುಸ್ಲಿಂ ಲೇಖಕರ ಸಣ್ಣ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ನೆಲೆಗಳು; ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿ.ವಿ.
* ಮಹಿಳಾ ಸಾಹಿತ್ಯ ರಚನೆಯ ಪ್ರೇರಣೆಗಳು; ೧೩ ಏಪ್ರಿಲ್, ೨೦೨೦; https://gfge.kar.nic.in FileH
* ಮಾಲತಿ ಮುದಕವಿ; ಜುಲೈ ೪ ೨೦೧೯, ಮಹಿಳಾ ಸಾಹಿತ್ಯ... ಅಂದು-ಇಂದು...
* ಮುಕುಂದ ಪ್ರಭು ಎಂ (ಸಂ) ; ೨೦೦೦, ಪೊಲಿ- ಕೆನರಾ ೨೦೦ ಸಂದರ್ಭದ ನೆನಪಿನ ಸಂಪುಟ; ಪ್ರಕಾಶ್ ಆಫ್ ಸೆಟ್ ಪ್ರಿಂಟರ್ಸ್, ಬೈಕಂಪಾಡಿ, ಮಂಗಳೂರು, ಕರ್ನಾಟಕ
* ಮಂಗಳ ಪ್ರಿಯದರ್ಶಿನಿ; ೨೦೦೭, ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಪ್ರವೇಶಿಕೆ; ಮಹಿಳಾ ಅಧ್ಯಯನ ಕೇಂದ್ರ; ಕನ್ನಡ ವಿಶ್ವವಿದ್ಯಾಲಯ, ಹಂಪಿ
* ರಮೇಶ ಸಿ.; 2017; International Journal of Kanada Research 3(4); 143-150 www.kannadajournal.com
* ರಾಮಚಂದ್ರನ್ ಸಿ. ಎನ್. ; ೨೦೧೯, ಆಖ್ಯಾನ - ವ್ಯಾಖ್ಯಾನ, ವಿಮರ್ಶಾ ಲೇಖನಗಳ ಸಂಕಲನ; ಸಪ್ನ ಬುಕ್ ಹೌಸ್, ಗಾಂಧಿನಗರ ಬೆಂಗಳೂರು
* ರೋಹಿಣಿ ಬಿ. ಎಂ.; ೨೦೦೫, ಸ್ತ್ರೀ- ಭಿನ್ನ ಮುಖಗಳು; ಹೇಮಾಂಶು ಪ್ರಕಾಶನ, ದೇರೆಬೈಲು ಮಂಗಳೂರು

- ರಂಗನಾಥ ರಾವ್ ಜಿ.ಎನ್. ; ೨೦೨೦, ಬೆಳಕಿಗೊಂದು ಗವಾಕ್ಷಿ; ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು
- ರಂಗನಾಥರಾವ್ ಜಿ. ಎನ್; ೪ ಮಾರ್ಚ,೨೦೧೮, ನೇಸರ ಗೂಡು-ಸ್ತ್ರೀವಾದಿ ಸಾಹಿತ್ಯದ ವಿಜಯಾದಬ್ಬೆ; ವಾರ್ತಾಭಾರತಿ.
- ರಂಗಸ್ವಾಮಿ ಎಚ್.ಟಿ.; November 15, 2019 to Dec 31, 2019, ಕನ್ನಡ ಸಾಹಿತ್ಯಕ್ಕೆ ಮುಸ್ಲಿಂ ಕಥೆಗಾರರ ಕೊಡುಗೆ; Vol-5, Issue-1,
- ಲಕ್ಷ್ಮೀನಾರಾಯಣ ಭಟ್ಟ ಎನ್. ಎಸ್; ೨೦೧೯, ಕನ್ನಡ ಸಾಹಿತ್ಯ ಚರಿತ್ರೆ, ಪ್ರಾಚೀನ-ಆಧುನಿಕ; ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು
- ವಸುಂಧರಾ ಭೂಪತಿ; ೨೫ ಡಿಸೆಂಬರ್,೨೦೧೫, ಮಹಿಳೆ ಕುರಿತ ಸಾಮಾಜಿಕ ದೃಷ್ಟಿಕೋನ ಬದಲಾಗುವುದು ಹೇಗೆ?; By Digital Kannada
- ಶಹನಾಝ್ ಎಂ; ಮೇ ೫, ೨೦೧೮, ಯುವವಾಹಿನಿ (ರಿ) ಮಂಗಳೂರು ಮಹಿಳಾ ಘಟಕದ ವತಿಯಿಂದ ಸಂತೃಪ್ತ ಮಹಿಳೆ ಕಾರ್ಯಾಗಾರ; yuvavaahini.in>....
- ಶಿವರುದ್ರಪ್ಪ ಜಿ. ಎಸ್.; ೨೦೧೬, ಸಮಗ್ರ ಗದ್ಯ- ಸಂಪುಟ ೨; ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು
- ಶಿವಾನಂದ ಈ ಕಳಕಣ್ಣವರ; ೨೦೦೩, ಕನ್ನಡ ಮುಸ್ಲಿಂ ಲೇಖಕರ ಕಥಾ ಸಾಹಿತ್ಯ- ಒಂದು ಅಧ್ಯಯನ; ನೆಹರು ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ
- ಶ್ರೀಮತಿ ಎಚ್. ಎಸ್; ೨೦೦೬, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

- ಶಂಕರ್ ರಾವ್ ಚ.ನ. ; ೨೦೧೬-೧೭, ಮಹಿಳಾ ಅಧ್ಯಯನ ಪರಿಚಯ; ಜೈ ಭಾರತ್ ಪ್ರಕಾಶನ, ಮಂಗಳೂರು
- ಷರೀಫಾ ಕೆ; ೨೦೧೧, ಮುಸ್ಲಿಂ ಮಹಿಳಾ ಸಂವೇದನೆ; ಅಂಕಿತ ಪುಸ್ತಕ, ಬೆಂಗಳೂರು
- ಸವಿತಾ ಗುರಪ್ಪ ಕೊಟಬಾಗಿ; ; ೨೦೦೬, ಶ್ರೀಮತಿ ಸಾರಾ ಅಬೂಬಕ್ಕರ್ ಅವರ ಕಥಾಸಾಹಿತ್ಯ; ಡಾಕ್ಟರ್ ಆರ್. ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಸಬಿಹ ಭೂಮಿಗೌಡ (ಸಂ); ೨೦೦೬; ಮಹಿಳಾ ಸಾಹಿತ್ಯ; ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ರಿಜಿಸ್ಟ್ರಾರ್; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು
- ಸಬಿಹಾ ಭೂಮಿಗೌಡ (ಸಂ) ;೨೦೦೮, ಸಂಸ್ಕೃತಿ ಮಹಿಳಾ ಮಾಲಿಕೆ -ಸಂಪುಟ ೧; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
- ಸಾರಾ ಅಬೂಬಕ್ಕರ್; ೨೦೧೦, ಹೊತ್ತು ಕಂತುವ ಮುನ್ನ (ಆತ್ಮಕಥೆ); ಚಂದ್ರಗಿರಿ ಪ್ರಕಾಶನ, ಸೂಕ್ಷ್ಮ ತರಂಗ ನಿಲಯ ರಸ್ತೆ, ಮಂಗಳೂರು
- ಸಾರಾ ಅಬೂಬಕ್ಕರ್ ; ಡಿಸೆಂಬರ್ ೨೦೧೬, ಕನ್ನಡ ಸಾಹಿತ್ಯ ಪರಿಷತ್ತು; https://kannada sahityaparishattu.in>...
- ಸಾರಾ ಅಬೂಬಕ್ಕರ್; ೧೯೯೭, ಲೇಖನ ಗುಚ್ಚ; ಚಂದ್ರಗಿರಿ ಪ್ರಕಾಶನ, ಮಂಗಳೂರು
- ಸಿದ್ರಾಮ ಬಹಿ ಕಾಂಬಳೆ; ೨೦೦೬, ದಲಿತ-ಬಂಡಾಯ ಕಥಾ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ; ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಸುಜಾತಾ ಮಹಾದೇವಪ್ಪ; ೨೦೧೯, ಕನ್ನಡ ಮುಸ್ಲಿಂ ಲೇಖಕರ ಸಣ್ಣ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ನೆಲೆಗಳು; ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿ.ವಿ.

- ಸುಲತಾ ವಿದ್ಯಾಧರ್; ೨೦೦೯, ಶ್ರೀ ಮುಡಿ (ಕರಾವಳಿ ಲೇಖಕಿಯರ ಮಾಹಿತಿ ಕಣಜ); ಶ್ರೀ ಚಕ್ರ ಪ್ರಕಾಶನ, ಮೂಡಬಿದಿರೆ
- ಸುಮಿತ್ರಾಬಾಯಿ ಬಿ. ಎನ್. ಮತ್ತು ಎಸ್. ಗಾಯತ್ರಿ (ಸಂ) ; ೧೯೯೫, ಸ್ತ್ರೀವಾದಿ ಪ್ರವೇಶಿಕೆ; ಕರ್ನಾಟಕ ಲೇಖಕಿಯರ ಸಂಘ.
- ಸುಮಿತ್ರಾ ಬಾಯಿ ಬಿ. ಎನ್; ೨೦೦೦; ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು; ಪ್ರೊ. ಎಂ. ವಿ. ನಾವಡ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ; ಹಂಪಿ

<u>ಸಂಶೋಧನಾ ಪೂರಕ ಪ್ರಕಟಿತ ಲೇಖನಗಳು ಹಾಗೂ ಮಂಡನಾ ಪ್ರಬಂಧಗಳು:</u>

- ಅರ್ಷಿಯಾ & ನಾಗಪ್ಪಗೌಡ ಆರ್. 2021; ಮುಸ್ಲಿಂ ವಿವಾಹ ಸಂರಕ್ಷಣಾ ಮಸೂದೆ-2019 ಮತ್ತು ಸಾರಾ ಅಬೂಬಕ್ಕರ್ ರವರ ಚಿಂತನೆಗಳು; ೨೦೨೦-ISSN;2454-5813; Vol. 7, Issue 2. International Journal of Kannada Research.
- Arshiya and Nagappa Gowda R.; Gender Disparities Among Muslim Community As Per The Reading of Sara Aboobakkar's Novels; 2018; Journal of Higher Education and Research Society-A Referred International ISSN-23490209 -Vol-6/ Issue-1 (UGC Approved SR No. 256/ Journal No. 48102).
- Arshiya and Nagappa Gowda R.; 2019, New Act for Indian Muslim Women and Sara Aboobakkar's Thinking; - ISBN; 978-93-85822-95-7
- Arshiya and Nagappa Gowda R. ;2022, Muslim Women and Justise in the Present Indian Society and the Role of Muslim Kannada Literature; Rabindra Bharati Journal of Phylosophy; ISSN: 0973-0087; Vol. XX111, NO:11, 2022